## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ವಿಶೇಷ ಎನ್.ಡಿ.ಪಿ.ಎಸ್ ಸಿ ಸಿ ನಂಃ 7/2020

| | | |
|---|---|---|
| ಪಿರ್ಯಾಧಿದಾರರು | – | ಕರ್ನಾಟಕ ರಾಜ್ಯದ ಪರವಾಗಿ<br>ಪಿ.ಐ , ಹುಬ್ಬಳ್ಳಿ ಉಪನಗರ ಪೋಲಿಸಠಾಣೆ |
| | | ವಿರುದ್ಧ |
| ಆರೋಪಿ | 1. | ಮಾರುತಿ ಕಲ್ಲಪ್ಪ ಹರಣಶಿಕಾರಿ |
| | 2. | ಚಂದಪ್ಪ ಸಿದ್ದಪ್ಪ ಹರಣಶಿಕಾರಿ |
| | 3. | ಅಬ್ದುಲರಜಾಕ ಮೊಹಮ್ಮದಸಾಬ ಕಸಬಾಗ |
| | 4. | ಚಂದ್ರಕಾಂತ ಹರಿಶ್ಚಂದ್ರ ಚವ್ಹಾಣ |

## ಕಲಂ 313 ಸಿ.ಆರ್.ಪಿ.ಸಿ. ರಡಿಯಲ್ಲಿ ಆರೋಪಿತನ ಹೇಳಿಕೆಯು

ಪ್ರಶ್ನೆ 1– ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ನುಡಿದಿರುವ ಎಲ್ಲಾ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೇಳಿಸಿಕೊಂಡಿರುವಿರಾ?

ಉತ್ತರಃ ಹೌದು.

ಪ್ರಶ್ನೆ 2– ಫ್ರಾಸಾ–01 /ಚಾಸಾ–2 ಲೋಹಿತ ಸಂಕನಗೌಡ , ತಮ್ಮ ಸಾಕ್ಷ್ಯದಲ್ಲಿ, ದಿಃ 02/09/2020 ರಂದು ತಾನು ತಹಶೀಲ್ದಾರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಮಧ್ಯಾಹ್ನ ಸುಮಾರು 3.30 ಗಂಟೆ ಸಮಯಕ್ಕೆ ತಹಶೀಲ್ದಾರರು ಲಿಖಿತ ಆದೇಶ ನೀಡಿ, ಹುಬ್ಬಳ್ಳಿಯ ಸಬ್ ಅರ್ಬನ್ ಪೋಲಿಸ್ ಠಾಣೆಗೆ ಒಂದು ಪ್ರಕರಣದಲ್ಲಿ ಸಾಕ್ಷಿಯಾಗಿ ಹೋಗಬೇಕು ಎಂದು ತಿಳಿಸಿದ್ದು ಅದರಂತೆ ತಾನು ಮತ್ತು ಚಾಸಾ.3 ಮಹೇಶ ಹುಬ್ಬಳ್ಳಿ ಸಬ್ ಅರ್ಬನ್ ಪೋಲಿಸ್ ಠಾಣೆಗೆ ಸಂಜೆ 4.00 ಗಂಟೆ ಸಮಯಕ್ಕೆ ಹೋಗಿದ್ದು ಅಲ್ಲಿ ಚಾಸಾ.1 ಪಿ.ಐ ರವರು ಗಾಂಜಾ ತೆಗೆದುಕೊಂಡು ಬರುತ್ತಿರುವ ಬಗ್ಗೆ ತಮಗೆ ಬಾತ್ಮಿ ಬಂದಿದ್ದು, ಸದರಿ ಸ್ಥಳದಲ್ಲಿ ದಾಳಿ

ಮಾಡಬೇಕಾಗಿದೆ ಕಾರಣ ನೀವು ಪಂಚರಾಗಿ ಬರಬೇಕು ಎಂದು ಹೇಳಿ ಒಂದು ಪತ್ರ ಕೊಟ್ಟರು ಅದಕ್ಕೆ ತಾನು ಒಪ್ಪಿಕೊಂಡು ಸಹಿ ಮಾಡಿದ್ದೇನೆ ಹಾಗೂ ಅದೇ ರೀತಿ ಚಾಸಾ.3 ಮಹೇಶನಿಗೂ ಸಹ ಪತ್ರವನ್ನು ಕೊಟ್ಟರು ಆತನೂ ಅದಕ್ಕೆ ಸಹಿ ಮಾಡಿದ್ದಾನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ.

ಪ್ರಶ್ನೆ 3– ಫ್ರಾಸಾ–01 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, .ಪತ್ರಾಂಕಿತ ಅಧಿಕಾರಿಯಾಗಿ ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆಯಿಂದ ಜೋನಲ್ ಅಧಿಕಾರಿಯವರನ್ನು ಹಾಗೂ ತೂಕ ಮಾಡುವವರನ್ನು ಪೋಲಿಸ್ ಠಾಣೆಗೆ ಕರೆಸಿದ್ದರು, ನಂತರ ತಾನು , ಚಾಸಾ.3 ಮಹೇಶ ಚಾಸಾ.1 ಪಿಐ, ಒಬ್ಬ ತೂಕ ಮಾಡುವವರು, ಪೊಲೀಸ್ ಸಿಬ್ಬಂದಿಗಳು ಎರಡು ಜೀಪುಗಳಲ್ಲಿ ಮತ್ತು ದ್ವಿಚಕ್ರ ವಾಹನಗಳಲ್ಲಿ ದೇಸಾಯಿ ಕ್ರಾಸ್, ಹುಬ್ಬಳ್ಳಿಗೆ ಹೋಗಿ ವಾಹನಗಳಿಂದ ಕೆಳಗೆ ಇಳಿದೆವು, ಆ ಸಮಯದಲ್ಲಿ ಪಿಂಟು ಸರ್ಕಲ್ ನಿಂದ ದೇಸಾಯಿ ಕ್ರಾಸ್ ಕಡೆಗೆ ಇಬ್ಬರು ಒಂದೇ ಮೋಟಾರ್ ಸೈಕಲ್ ನಲ್ಲಿ ಬರುತ್ತಿದ್ದು ಪೊಲೀಸ ಸಿಬ್ಬಂದಿಗಳು ಅವರನ್ನು ನಿಲ್ಲಲು ಹೇಳುತ್ತಿದ್ದಾಗ ಅವರು ನಿಲ್ಲದೇ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿ ಹುಬ್ಬಳ್ಳಿಯ ಸರ್ಕಿಟ್ ಹೌಸ್ ಪಕ್ಕದಲ್ಲಿರುವ ಸಂದಿಯಿಂದ ಹೋಗಲು ಯತ್ನಿಸಿದ್ದು ಸದರಿ ಸಂದಿಗೆ ಮುಂದೆ ಹೋಗಲು ದಾರಿ ಇಲ್ಲದ ಕಾರಣ ಅಲ್ಲಿ ಸಿಕ್ಕಿ ಹಾಕಿಕೊಂಡರು ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 4– ಫ್ರಾಸಾ–01 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, .ಅವರು ಸಿಕ್ಕ ನಂತರ ತಾವೆಲ್ಲರೂ ಅವರನ್ನು ಪರಿಶೀಲಿಸಲಾಗಿ ಅವರ ಬಳಿ ಒಂದು ಕಪ್ಪು ಮತ್ತು ಒಂದು ಹಳದಿ ಒಂದೊಂದು ಬ್ಯಾಗುಗಳಿದ್ದು ಪೊಲೀಸ್ ಅಧಿಕಾರಿಗಳು ಸದರಿ ಇಬ್ಬರನ್ನು ವಿಚಾರಣೆ ಮಾಡಿ ಬ್ಯಾಗುಗಳನ್ನು ಚೆಕ್ ಮಾಡಿದಾಗ ಕಪ್ಪು ಬಣ್ಣದ ಒಂದು ಬ್ಯಾಗಿನಲ್ಲಿ ಎರಡು ಪ್ಯಾಕೇಟ್‌ಗಳಿದ್ದು ಅದನ್ನು ತೆಗೆದು ನೋಡಿದಾಗ ಅದರಲ್ಲಿ ಗಾಂಜಾದ ಒಣಗಿದ

ಎಲೆಗಳು ಮತ್ತು ಬೀಜ ಇದ್ದವು, ಇನ್ನೊಂದು ಹಳದಿ ಬಣ್ಣದ ಬ್ಯಾಗಿನಲ್ಲಿ ಒಂದು ಪ್ಯಾಕ್ ಇದ್ದು ಅದನ್ನು ತೆಗೆದು ನೋಡಿದಾಗ ಅದರಲ್ಲೂ ಸಹ ಗಾಂಜಾ ಇತ್ತು ಅದನ್ನು ತೆಗೆಯಬೇಕಾದಲ್ಲಿ ಚಾಸಾ.1 ತಮ್ಮ ತಪಾಸಣೆ ಗೆಜೆಟೆಡ್ ಆಫೀಸರ್ ಮುಂದೆ ಮಾಡಬೇಕಾ ಎಂದು ಕೇಳಿ ಗೆಜೆಟೆಡ್ ಆಫೀಸರ್ ಎದುರಿಗೆ ತಪಾಸಣೆ ಮಾಡಿದ್ದಾರೆ. ಆರೋಪಿಗಳೂ ಸಹ ಗೆಜೆಟೆಡ್ ಅಧಿಕಾರಿಯ ಮುಂದೆ ತಮ್ಮನ್ನು ತಪಾಸಣೆ ಮಾಡಬೇಕೆಂದು ಹೇಳಿರುತ್ತಾರೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 5– ಫ್ರಾಸಾ–01 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಕಪ್ಪು ಬಣ್ಣದ ಬ್ಯಾಗಿನಲ್ಲಿದ್ದ ಎರಡು ಪ್ಯಾಕೇಟ್‌ಗಳನ್ನು ತೂಕ ಮಾಡಲಾಗಿ ಅವುಗಳಲ್ಲಿ ಒಂದು ಪ್ಯಾಕೇಟಿನ ತೂಕ 2 ಕೆ.ಜಿ., 31 ಗ್ರಾಂ. ಹಾಗೂ ಇನ್ನೊಂದು ಪ್ಯಾಕೇಟನ್ನು ತೂಕ ಮಾಡಿದಾಗ ಅದು 2 ಕೆ.ಜಿ., 20 ಗ್ರಾಂ. ಇದ್ದು ಅವುಗಳಲ್ಲಿ ತಲಾ 3 ಗ್ರಾಂ.ನಂತೆ ಸ್ಯಾಂಪಲಗಳನ್ನು ತೆಗೆದು ಅದಕ್ಕೆ ಎಸ್1 ಮತ್ತು ಎಸ್2 ಎಂದು ಬರೆದು ಅವುಗಳನ್ನು ಪುನಃ ಪ್ಯಾಕ್ ಮಾಡಿ ಮೊಹರು ಹಾಕಿದರು ಹಾಗೂ ಆತನ ಬಳಿ ಸದರಿ ಬ್ಯಾಗಿನಲ್ಲಿ ರೂ.1000/– ನಗದು ಹಣ ಸಿಕ್ಕಿದ್ದು ಪೊಲೀಸರು ಎರಡು ಪ್ಯಾಕೇಟ್ ಗಳನ್ನು, ಬ್ಯಾಗ್ ಮತ್ತು ನಗದು ಹಣವನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡರು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 6– ಫ್ರಾಸಾ–01 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪೊಲೀಸರು ಹಳದಿ ಬಣ್ಣದ ಬ್ಯಾಗನ್ನು ತೆಗೆದು ನೋಡಿದಾಗ ಅದರಲ್ಲಿ ಒಂದು ಪಾಕ್ ಇದ್ದು ಸದರಿ ಬ್ಯಾಗ್ 2 ನೇ ಆರೋಪಿ ಚಂದ್ರಪ್ಪ ಎನ್ನುವವನ ಬಳಿ ಇತ್ತು, ಅದನ್ನು ತೆಗೆದು ನೋಡಿದಾಗ, ಅದರಲ್ಲಿ ಗಾಂಜಾ ಇದ್ದು, ಅದನ್ನು ತೂಕ ಮಾಡಿದಾಗ, ಅದರ ಒಟ್ಟು ತೂಕ 1 ಕೆಜಿ., 49 ಗ್ರಾಂ. ಇರುವುದು ಕಂಡುಬಂದಿದ್ದು ಅದರಿಂದಲೂ ಸಹ 50 ಗ್ರಾಂ.

ತೂಕದ ಗಾಂಜಾವನ್ನು ಸ್ಯಾಂಪಲಗಾಗಿ ಪಡೆದು ಸದರಿ ಸ್ಯಾಂಪಲಿಗೆ ಎಸ್3 ಎಂದು ಬರೆದು, ಉಳಿದ ಗಾಂಜಾಗೆ ಆರ್3 ಎಂದು ಬರೆಯಲಾಯಿತು. ಸದರಿ ಪ್ಯಾಕುಗಳನ್ನು ಮೊಹರು ಮಾಡಿ ಅದರ ಮೇಲೆ ನಟ್ ಬೋಲ್ಟನಿಂದ ಮೊಹರು ಮಾಡಿದರು ಹಾಗೂ ಅದರ ಮೇಲೆ ಬರವಣಿಗೆ ಇತ್ತು ಹಾಗೂ ಪೊಲೀಸರು ಮೋಟಾರ್ ಸೈಕಲ್‌ನ್ನು ಸಹ ಅಮಾನತ್ತುಪಡಿಸಿಕೊಂಡಿದ್ದಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 7– ಫ್ರಾಸಾ–01 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಜಾಗದಲ್ಲಿ ಸಂಜೆ 6.15 ರಿಂದ ರಾತ್ರಿ 8.15 ರವರೆಗೆ ಪಂಚನಾಮೆಯನ್ನು ಬರೆದು ನಿಪಿ.4 ರಿಂದ 37 ಪೋಟೋಗಳನ್ನು ತೆಗೆದು ಸದರಿ ನಿಶಾನೆ ಪಿಃ 3 ಪಂಚನಾಮೆಗೆ ತನ್ನ, ಪತ್ರಾಂಕಿತ ಅಧಿಕಾರಿ, ಚಾಸಾ.1 ಪಿ.ಐ., ಚಾಸಾ.3 ಇಬ್ರಾಹೀಂಪುರ ಮತ್ತು ಪೊಲೀಸ್ ಸಿಬ್ಬಂದಿಗಳು ಸಹಿಗಳನ್ನು ಪಡೆದಿದ್ದಾರೆ ಹಾಗೂ ಆ ದಿನ ಪಡೆದ ಸ್ಯಾಂಪಲ್ ಪ್ಯಾಕೇಟಗಳನ್ನು, ನಗದು ಹಣ ಮತ್ತು ಬ್ಯಾಗ್‌ನ್ನು, ಕಪ್ಪು ಬಣ್ಣದ ಬ್ಯಾಕ್ ಪ್ಯಾಕ್ ಬ್ಯಾಗನ್ನು, ಹಳದಿ ಬಣ್ಣದ ಕ್ಯಾರಿಬ್ಯಾಗ್, ಬ್ರೌನ್ ಕವರಿನಲ್ಲಿ ಹಾಕಿರುವ ನಗದು ಒಟ್ಟು ರೂ.1000/–ಹಣವನ್ನು ಗುರುತಿಸಿದ್ದು ಹಾಗೂ 1 ಮತ್ತು 2 ನೇ ಆರೋಪಿಗಳು ಬಂದ ಮೋಟಾರ್ ಸೈಕಲ್‌ನ ಪೋಟೋವನ್ನು ನೋಡಿ ಗುರುತಿಸಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 8– ಫ್ರಾಸಾ–02 ಮಂಜೂರ ಮಿಶ್ರೀಕೋಟಿ ತಮ್ಮ ಸಾಕ್ಷ್ಯದಲ್ಲಿ, ದಿಃ 11–9–2020 ರಂದು ಉಪನಗರ ಪೊಲೀಸಠಾಣೆಯವರು ಸಂಜೆ 4.30 ಘಂಟೆಗೆ ತನ್ನನ್ನು ಠಾಣೆಗೆ ಕರೆಸಿದ್ದು ಠಾಣೆಯಲ್ಲಿ ಆರೋಪಿ ಮಾರುತಿ ಕಲ್ಲಪ್ಪ ಹರಣಶಿಕಾರಿ ಇದ್ದು ಆತನು ತನಗೆ ಸೇರಿದ ರೆಡ್ಮಿ ಮೊಬೈಲನ್ನು ಗಾಂಜಾ ಮಾರಾಟ ಮಾಡಲು ಉಪಯೋಗಿಸಿದ್ದು ಅದನ್ನು ತೋರಿಸುತ್ತೇನೆ ಎಂದು ಹೇಳಿದ್ದು ಅದರಂತೆ ಆರೋಪಿತನು ತಮ್ಮನ್ನು ಮತ್ತು ಪೊಲೀಸರನ್ನು ಪಿಂಟೋ

ಸರ್ಕಲ ಹತ್ತಿರ ದೇಸಾಯಿ ಕ್ರಾಸ ಹುಬ್ಬಳ್ಳಿ ಬಳಿ ಕರೆದುಕೊಂಡು ಹೋಗಿ ಖುಲ್ಲಾ ಜಾಗದಲ್ಲಿ ಇಟ್ಟಿದ್ದ ಮೊಬೈಲನ್ನು ಹಾಜರುಪಡಿಸಿದ್ದು ಪೊಲೀಸರು ಸದರಿ ಮೊಬೈಲನ್ನು ಅಮಾನತುಪಡಿಸಿಕೊಂಡು ಸಂಜೆ 5 ರಿಂದ 5.45 ಗಂಟೆ ಅವಧಿಯಲ್ಲಿ ನಿಶಾನೆ ಪಿಃ 43 ಪಂಚನಾಮೆ ಬರೆದು ತನ್ನ ಸಹಿ ಪಡೆದಿರುತ್ತಾರೆ ಹಾಗೂ ಪಂಚನಾಮೆ ಕಾಲಕ್ಕೆ ನಿಶಾನೆ ಪಿ-44 ಮತ್ತು 45 ಫೋಟೊ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 9- ಫ್ರಾಸಾ-03 ಸುಂದರೇಶ ಹೊಳೆಯಣ್ಣವರ, ಸಿಪಿಐ ತಮ್ಮ ಸಾಕ್ಷ್ಯದಲ್ಲಿ, ದಿಃ 2-9-2020 ರಂದು ಮಧ್ಯಾಹ್ನ 3.15 ಘಂಟೆ ಸುಮಾರಿಗೆ ತಾನು ಎಸ್ ಎಚ್ ಓ ಕರ್ತವ್ಯದಲ್ಲಿದ್ದಾಗ ಯಾರೋ ಇಬ್ಬರು ವ್ಯಕ್ತಿಗಳು ಮೋಟಾರ ಸೈಕಲ ಮೇಲೆ ಗಾಂಜಾ ತೆಗೆದುಕೊಂಡು ದೇಸಾಯಿ ಸರ್ಕಲ ಕಡೆ ಬರುತ್ತಿದ್ದಾರೆಂದು ಬಾತ್ಮಿ ಬಂದ ಮೇರೆಗೆ ಮಾನ್ಯ ಎ ಸಿ ಪಿ ರವರಿಗೆ ಲಿಖಿತವಾಗಿ ವಿಷಯ ತಿಳಿಸಿ ಅವರಿಂದ ಅನುಮತಿ ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 10- ಫ್ರಾಸಾ-03 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಇಬ್ಬರು ಸರ್ಕಾರಿ ಪಂಚರನ್ನು ಕಳುಹಿಸುವಂತೆ ತಹಶೀಲ್ದಾರ ಹುಬ್ಬಳ್ಳಿ ರವರಿಗೆ ಲಿಖಿತವಾಗಿ ಮನವಿ ಸಲ್ಲಿಸಿದ್ದು ತಹಶೀಲ್ದಾರರು ಲೋಹಿತ ಮತ್ತು ಮಹೇಶ ಎನ್ನುವವರನ್ನು ಪಂಚರಾಗಿ ಕಳುಹಿಸಿರುತ್ತಾರೆ, ಸದರಿ ಲೋಹಿತ ಮತ್ತು ಮಹೇಶ ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನೋಟೀಸು ನೀಡಿ ಒಪ್ಪಿಗೆ ಪಡೆದುಕೊಂಡು ನಂತರ ಆರೋಪಿತರ ಅಂಗಶೋಧನೆಗಾಗಿ ಪತ್ರಾಂಕಿತ ಅಧಿಕಾರಿಯನ್ನು ಕಳುಹಿಸಿಕೊಡುವಂತೆ ಆಯುಕ್ತರು, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯವರಿಗೆ ಕೋರಿಕೊಂಡಿರುತ್ತೇನೆ ಹಾಗೂ ಚಾಸಾ-8 ರಿಯಾಜ ಅಹ್ಮದ ರವರಿಗೆ ನೋಟೀಸು ನೀಡಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ನೋಟೀಸು ನೀಡಿ ಒಪ್ಪಿಗೆ ಪಡೆದಿದ್ದೇನೆ ಹಾಗೂ ತೂಕ ಮಾಡುವ ವ್ಯಕ್ತಿಯನ್ನು ಕಳುಹಿಸುವಂತೆ ಸಹಾಯಕ ನಿರೀಕ್ಷಕರು ಕಾನೂನು ಮಾಪನ ಶಾಸ್ತ್ರ ಇಲಾಖೆ ಎ ಪಿ ಎಂ ಸಿ ರವರಿಗೆ ಪತ್ರ ಕಳುಹಿಸಿದ್ದೇನೆ ಹಾಗೂ ಚಾಸಾ-9 ಸಿದ್ದಪ್ಪ ಪೂಜಾರ ರವರು ಠಾಣೆಗೆ

ಬಂದಿದ್ದು ಸದರಿಯವರಿಗೆ ನೋಟೀಸು ನೀಡಿ ಒಪ್ಪಿಗೆ ಸಹಿ ಪಡೆದಿರುತ್ತೇನೆ. ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 11– ಫ್ರಾಸಾ–03 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ನಂತರ ಇಬ್ಬರು ಪಂಚರು, ಪತ್ರಾಕಿತ ಅಧಿಕಾರಿ , ಸಿಬ್ಬಂದಿಗಳಾದ ಎಸ್ ಎಸ್ ಪಾಂಡೆ , ಎಂ ಬಿ ಧನಗೊಂಡ , ಎಂ ವೈ ಯಕ್ಕಡಿ , ಪಿ ಎಂ ಹೆಗ್ಗೇರಿ , ಮುಲ್ಲಾ , ಅಳಗವಾಡಿ , ಕಮತರ , ಬೀರಣ್ಣ ರವರಿಗೆ ವಿಷಯ ತಿಳಿಸಿ, ತಾವೆಲ್ಲರೂ ಸೇರಿಕೊಂಡು ಸರ್ಕಾರಿ ಜೀಪ ನಂಃ ಕೆಎ–25 –ಜಿ– 409 ರಲ್ಲಿ ಮತ್ತು ಚಾಲುಕ್ಯ ಜೀಪ ನಂಃ ಕೆಎ–25–ಜಿ–652 ವಾಹನಗಳಲ್ಲಿ ಸಂಜೆ 5 ಘಂಟೆಗೆ ಠಾಣೆಯಿಂದ ಹೊರಟು ಪಿಂಟೋ ಸರ್ಕಲಗೆ ಹೋಗಿ , ದೇಸಾಯಿ ಸರ್ಕಲಗೆ ಹೋಗಿದ್ದು ವಾಹನದ ಜೊತೆಯಲ್ಲಿ ಇನ್ನಿಬ್ಬರು ಸಿಬ್ಬಂದಿ ಬೈಕನಲ್ಲಿ ಬಂದಿದ್ದು, ದೇಸಾಯಿ ಸರ್ಕಲ ಬಳಿ ವಾಹನ ನಿಲ್ಲಿಸಿ ವಾಚ್ ಮಾಡುತ್ತಿದ್ದೆವು ಮತ್ತು ಇನ್ನಿಬ್ಬರು ಸಿಬ್ಬಂದಿಗಳು ದೇಶಪಾಂಡೆ ನಗರದ ಮುಖ್ಯ ರಸ್ತೆ ಐ ಬಿ ಕ್ರಾಸ ಹತ್ತಿರ ವಾಚ್ ಮಾಡುತ್ತ ನಿಂತಾಗ ಸಂಜೆ 5–50 ಘಂಟೆ ಸುಮಾರಿಗೆ ಪಿಂಟೋ ಸರ್ಕಲ ಬಳಿ ಇಬ್ಬರು ವ್ಯಕ್ತಿಗಳು ಬೈಕನಲ್ಲಿ ಬಂದಿದ್ದು ಬೈಕ ನಡೆಸುತ್ತಿದ್ದ ವ್ಯಕ್ತಿಯ ಬೆನ್ನ ಹಿಂದೆ ಕಪ್ಪು ಬಣ್ಣದ ಬ್ಯಾಗ ಹಾಗೂ ಹಿಂದೆ ಕುಳಿತ ವ್ಯಕ್ತಿ ಹಳದಿ ಬಣ್ಣದ ಕೈ ಚೀಲ ಹಿಡಿದುಕೊಂಡು ಕುಳಿತಿದ್ದು ಸದರಿ ವ್ಯಕ್ತಿಗಳ ಮೇಲೆ ಸಂಶಯ ಬಂದು ಅವರನ್ನು ಬೆನ್ನತ್ತಿದಾಗ ಅವರು ಬೈಕನ್ನು ಜೋರಾಗಿ ನಡೆಸುತ್ತ ದೇಶಪಾಂಡೆ ಕ್ರಾಸ ಕಡೆಗೆ ಹೋದರು, ಆಗ ಅಲ್ಲಿದ್ದ ತಮ್ಮ ಸಿಬ್ಬಂದಿ ಅವರನ್ನು ಅಡ್ಡಗಟ್ಟಲು ಸದರಿಯವರು ಮರಳಿ ಅಸೆನ ಚರ್ಚನ ಪಕ್ಕದಲ್ಲಿರುವ ಒಂದು ಕಚ್ಚಾ ರಸ್ತೆಯ ಮೂಲಕ ಹೋಗಿದ್ದು ಅಲ್ಲಿ ಮುಂದೆ ರಸ್ತೆ ಇಲ್ಲದ ಕಾರಣ ಸದರಿ ಬೈಕ ನಿಧಾನವಾಗಿ ಚಲಿಸುತ್ತಿತ್ತು. ಆಗ ತಮ್ಮ ಸಿಬ್ಬಂದಿ ಸದರಿ ಬೈಕ ಸವಾರರನ್ನು ಹಿಡಿದುಕೊಂಡರು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 12– ಫ್ರಾಸಾ–03 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಧನಗೊಂಡ ಮತ್ತು ಪಾಂಡೆ ಎನ್ನುವ ಸಿಬ್ಬಂದಿಗಳು ಬೈಕ ಸವಾರನನ್ನು ಹಿಡಿದುಕೊಂಡರು ಹಾಗೂ ಹಿಂದೆ ಕುಳಿತ

ವ್ಯಕ್ತಿಯನ್ನು ಯಕ್ಕಡಿ ಮತ್ತು ಚಿಕ್ಕಲಗಾರ , ಹೊಸಮನಿ ಎಂಬ ಸಿಬ್ಬಂದಿಗಳು ಹಿಡಿದರು, ಆಗ ತಾವು , ಪಂಚರು , ಪತ್ರಾಂಕಿತ ಅಧಿಕಾರಿ ಮತ್ತು ತೂಕ ಮಾಡುವ ವ್ಯಕ್ತಿ ಎಲ್ಲರೂ ಸೇರಿ ಹೋಗಿ ಅವರನ್ನು ವಿಚಾರಿಸಲಾಗಿ ಬೈಕ ಸವಾರ ತನ್ನ ಹೆಸರು ಮಾರುತಿ ಕಲ್ಲಪ್ಪ ಹರಣಶಿಕಾರಿ ಎಂದು ತಿಳಿಸಿದ್ದು ಹಾಗೂ ಇನ್ನೊಬ್ಬ ವ್ಯಕ್ತಿ ಚಂದಪ್ಪ ಸಿದ್ದಪ್ಪ ಹರಿಣಶಿಕಾರಿ ಎಂದು ತಿಳಿಸಿದ್ದು ಅವರ ಕೈಯಲ್ಲಿ ಗಾಂಜಾ ಇದೆ ಎಂದು ಖಾತ್ರಿಯಾದ ನಂತರ ಇದನ್ನು ಎಲ್ಲಿಂದ ತಂದಿದ್ದೀರಿ ತಮಗೆ ಪರ್ಮಿಟ ಇದೆಯಾ ಎಂದು ಕೇಳಿದೆವು ಹಾಗೂ ಅಂಗ ಜಪ್ತಿ ಮಾಡಲು ಪತ್ರಾಂಕಿತ ಅಧಿಕಾರಿಯ ಸಮಕ್ಷಮ ಮಾಡಬೇಕೋ ಅಥವಾ ನ್ಯಾಯಾಧೀಶರ ಸಮಕ್ಷಮ ಮಾಡಬೇಕೋ ಎಂದು ಕೇಳಿ ನೋಟೀಸು ನೀಡಿದ್ದು ಆರೋಪಿ ಮಾರುತಿಯು ಪತ್ರಾಂಕಿತ ಅಧಿಕಾರಿಯ ಮುಂದೆ ಅಂಗಶೋಧನೆ ಮಾಡಬೇಕೆಂದು ಒಪ್ಪಿಗೆ ನೀಡಿ ಸಹಿ ಮಾಡಿದ್ದಾನೆ ಎಂದು ಸಾಕ್ಷ್ಯನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 13– ಫ್ರಾಸಾ–03 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪತ್ರಾಂಕಿತ ಅಧಿಕಾರಿಯ ಸಮಕ್ಷಮ 1 ನೇ ಆರೋಪಿಯ ಬ್ಯಾಗನ್ನು ಪರಿಶೀಲಿಸಲಾಗಿ ಅದರಲ್ಲಿ ಎರಡು ಗಾಂಜಾ ತುಂಬಿದ ಪಾಕೇಟಗಳು ಇದ್ದು ಅದರಲ್ಲಿ ಒಂದು ಬ್ಯಾಗನಲ್ಲಿದ್ದ ಗಾಂಜಾವನ್ನು ತೆಗೆದು ತೂಕ ಮಾಡಲಾಗಿ ಅದು 2 ಕೆ ಜಿ 31 ಗ್ರಾಂ ತೂಕ ಇತ್ತು ಹಾಗೂ ಇನ್ನೊಂದು ಬ್ಯಾಗನಲ್ಲಿದ್ದ ಗಾಂಜಾವನ್ನು ತೂಕ ಮಾಡಲಾಗಿ ಅದು 2 ಕೆ ಜಿ 20 ಗ್ರಾಂ ತೂಕ ಇತ್ತು ಹಾಗೂ ಆತನ ಸ್ವಾಧೀನದಲ್ಲಿ ರೂ. 1000/– ಮತ್ತು ಒಂದು ಕರಿ ಬ್ಯಾಗ ಮತ್ತು ಒಂದು ಮೋಟಾರ ಸೈಕಲ ಕೆಎ–26–ಇಡಿ–2911 ನ್ನು ಅಮಾನತುಪಡಿಸಿಕೊಂಡಿರುತ್ತೇವೆ ಹಾಗೂ 2 ನೇ ಆರೋಪಿಯ ಬಳಿ ಇದ್ದ ಹಳದಿ ಬ್ಯಾಗನ್ನು ಪರಿಶೀಲಿಸಲಾಗಿ ಅದರಲ್ಲಿ ಗಾಂಜಾ ತುಂಬಿದ ಬಂಡಲ ಇದ್ದು ಅದನ್ನು ತೂಕ ಮಾಡಲಾಗಿ ಅದರಲ್ಲಿ ಒಂದು ಕೆ ಜಿ 49 ಗ್ರಾಂ ತೂಕದ ಗಾಂಜಾ ಇತ್ತು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 14– ಫ್ರಾಸಾ–03 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 1 ನೇ ಆರೋಪಿಯ ಸ್ವಾಧೀನದಿಂದ ವಶಪಡಿಸಿಕೊಂಡ 2 ಬಂಡಲ ಗಾಂಜಾದಿಂದ ತಲಾ 100 ಗ್ರಾಂ ಗಾಂಜಾವನ್ನು

ಮಾದರಿಗಾಗಿ ಪಡೆಯಲಾಯಿತು ಹಾಗೂ 2 ನೇ ಆರೋಪಿಯ ಸ್ವಾಧೀನದಿಂದ ವಶಪಡಿಸಿಕೊಂಡ ಗಾಂಜಾದಿಂದ ತಲಾ 50 ಗ್ರಾಂ ಗಾಂಜಾವನ್ನು ಮಾದರಿಗಾಗಿ ಪಡೆಯದು ಮಾದರಿಗಾಗಿ ತೆಗೆದ ಗಾಂಜಾವನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಪ್ಯಾಕ ಮಾಡಿ ಪಂಚರ ಮತ್ತು ಪತ್ರಾಂಕಿತ ಅಧಿಕಾರಿಗಳ ಸಹಿ ಇರುವ ಚೀಟಿ ಅಂಟಿಸಲಾಯಿತು ಹಾಗೂ ಸ್ಯಾಂಪಲ ತೆಗೆದು ಉಳಿದ ಗಾಂಜಾಗಳನ್ನು ಆರ್ –1 , ಆರ್– 2 ಮತ್ತು ಆರ್–3 ಎಂದು ಗುರುತಿಸಿ ಸದರಿ ಪಾಕೇಟಗಳ ಮೇಲೆ ಪಂಚರ ಮತ್ತು ಪತ್ರಾಂಕಿತ ಅಧಿಕಾರಿಗಳ ಸಹಿ ಇರುವ ಚೀಟಿ ಅಂಟಿಸಲಾಯಿತು ಹಾಗೂ ಸ್ಯಾಂಪಲ ಗಾಂಜಾ ಪಾಕೇಟ ಮತ್ತು ಉಳಿದ ಗಾಂಜಾ ಪಾಕೇಟ ಮೇಲೆ ಜಿ ಎಂ ಎಫ್ ಎ –2 ಬೋಲ್ಟ ಸೀಲು ಹಾಕಿ ಬೋಲ್ಟನ್ನು ಪಂಚನಾದ ಇಬ್ರಾಹಿಂಪೂರ ರವರಿಗೆ ನೀಡಿ ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಹೇಳಿ ಅವರ ಸಹಿ ಪಡೆದಿದ್ದೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 15– ಫ್ರಾಸಾ–03 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿತರಿಗೆ ದಸ್ತಗಿರಿ ಮಾಡಿ. ಎಲ್ಲ ನಡುವಳಿಕೆಯ ಬಗ್ಗೆ ಪಿಸಿ ಮುಲ್ಲಾ ರವರ ಮುಖಾಂತರ ಫೋಟೊಗಳನ್ನು ತೆಗೆಸಿ ಸ್ಥಳದಲ್ಲಿ ಕಚ್ಚಾ ನಕ್ಷೆ ತೆಗೆಸಿರುತ್ತೇನೆ ಹಾಗೂ ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 6.15 ರಿಂದ 8.15 ರ ವರೆಗೆ ಬರೆದಿದ್ದೇನೆ ಹಾಗೂ ಆರೋಪಿತನ ಸ್ವಾಧೀನದಿಂದ ಅಮಾನತುಪಡಿಸಿದ ಮೋಟಾರ ಸೈಕಲನ್ನು , ಸ್ಯಾಂಪಲ ಗಾಂಜಾವನ್ನು, 1 ನೇ ಆರೋಪಿಗೆ ಸೇರಿದ ಕಪ್ಪು ಬ್ಯಾಗ ಮತ್ತು 2 ನೇ ಆರೋಪಿಗೆ ಸೇರಿದ ಹಳದಿ ಬ್ಯಾಗನ್ನು 1 ನೇ ಆರೋಪಿತನ ಸ್ವಾಧೀನದಿಂದ ಅಮಾನತುಪಡಿಸಿಕೊಂಡ ರೂ.1000 ನ್ನು ಗುರುತಿಸುವುದಾಗಿ ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 16– ಫ್ರಾಸಾ–03 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಗಳನ್ನು ದಸ್ತಗಿರಿ ಮಾಡಿ ಪಂಚನಾಮೆ ಮಾಡಿದ ನಂತರ, ಆರೋಪಿಗಳು, ಪಂಚನಾಮೆ ಮತ್ತು ಮುದ್ದೆಮಾಲುಗಳ ಸಮೇತ ಠಾಣೆಗೆ ವಾಪಸಾಗಿ ಸರ್ಕಾರದ ಪರವಾಗಿ ನಿಶಾನೆ ಪಿ–56 ಲಿಖಿತ ಪಿರ್ಯಾದು

ಸಲ್ಲಿಸಿದ್ದೇನೆ ಹಾಗೂ ಪಿರ್ಯಾದು ನೀಡಿದ ನಂತರ ವಿಶೇಷ ವರದಿಯನ್ನು ತಯಾರಿಸಿ ಮೇಲಾಧಿಕಾರಿಗೆ ಸಲ್ಲಿಸಿದ್ದೇನೆ ಮತ್ತು ಆ ದಿನ ದಸ್ತಗಿರಿ ಮಾಡಿದ ಮಾರುತಿ ಮತ್ತು ಚಂದಪ್ಪ ಎನ್ನುವ ಆರೋಪಿಗಳನ್ನು ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 17– ಫ್ರಾಸಾ–04 ರಿಯಾಜಅಹ್ಮದ ಹುಬ್ಬಳ್ಳಿ , ಸಹಾಯಕ ಅಭಿಯಂತರರು, ಮಹಾನಗರ ಪಾಲಿಕೆ ತಮ್ಮ ಸಾಕ್ಷ್ಯದಲ್ಲಿ, ದಿಃ 2–9–2020 ರಂದು ಮಧ್ಯಾಹ್ನ 3 ಘಂಟೆಗೆ ತಾನು ಕಚೇರಿಯಲ್ಲಿದ್ದಾಗ ಹುಬ್ಬಳ್ಳಿ ಉಪನಗರ ಪೊಲೀಸಠಾಣೆಯಿಂದ ಒಂದು ಪತ್ರಬಂದಿದ್ದು ಮೇಲಾಧಿಕಾರಿಯವರು ತನ್ನನ್ನು ಕರೆದು ಠಾಣೆಗೆ ಹೋಗುವಂತೆ ತಿಳಿಸಿದ್ದು ಅದರಂತೆಸಂಜೆ 4.30 ಘಂಟೆಗೆ ಹುಬ್ಬಳ್ಳಿಯ ಉಪನಗರ ಪೊಲೀಸಠಾಣೆಗೆ ಹೋಗಿದ್ದು ಠಾಣೆಯಲ್ಲಿ ಇನ್ಸಪೆಕ್ಟರ ರವರು ಇದ್ದು ತಮಗೆ ಅನಧಿಕೃತವಾಗಿ ಗಾಂಜಾ ಮಾರಾಟವಾಗುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು ಪತ್ರಾಂಕಿತ ಅಧಿಕಾರಿಯಾಗಿ ಬರುವಂತೆ ನೋಟೀಸು ನೀಡಿದರು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 18– ಫ್ರಾಸಾ–04 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಹಶೀಲ್ದಾರ ಕಚೇರಿಯಿಂದ ಇಬ್ಬರು ಪಂಚರು ಬಂದಿದ್ದು, ತೂಕ ಮತ್ತು ಮಾಪನ ಇಲಾಖೆಯಿಂದ ಒಬ್ಬರು ಇನ್ಸಪೆಕ್ಟರ ಬಂದಿದ್ದರು, ತಾನು ಇನ್ಸಪೆಕ್ಟರ ಮತ್ತು ತಹಶೀಲ್ದಾರ ಕಚೇರಿಯಿಂದ ಬಂದ ಇಬ್ಬರು ಪಂಚರು ಸೇರಿ ಒಂದು ಜೀಪನಲ್ಲಿ ಹೋಗಿದ್ದು, ತೂಕ ಮಾಡುವ ವ್ಯಕ್ತಿ ಮತ್ತು ಪೊಲೀಸ ಸಿಬ್ಬಂದಿ ಇನ್ನೊಂದು ವಾಹನದಲ್ಲಿ ಬಂದಿದ್ದು ತಾವೆಲ್ಲರೂ ದೇಸಾಯಿ ಕ್ರಾಸ ಹತ್ತಿರ ನಿಂತುಕೊಂಡಿದ್ದು ಸಂಜೆ ಸುಮಾರು 5.50 ಗಂಟೆ ಸುಮಾರಿಗೆ ಪಿಂಟೋ ಸರ್ಕಲ ಕಡೆಯಿಂದ ಒಂದು ಬೈಕ ಬಂದಿದ್ದು, ಪೊಲೀಸರು ಅವರನ್ನು ಹಿಡಿಯಲು ಪ್ರಯತ್ನಿಸಿದಾಗ ಅವರು ತಪ್ಪಿಸಿಕೊಂಡು ಅಸೆನ್ಸ ಚರ್ಚ ಹತ್ತಿರ ಇರುವ ಕಚ್ಚಾ ರಸ್ತೆಯಲ್ಲಿ ಹೋಗಿದ್ದು ಆದರೆ ಅವರಿಗೆ ಮುಂದೆ ಹೋಗಲು ರಸ್ತೆ ಇಲ್ಲದ ಕಾರಣ ಪೊಲೀಸರು ಅವರನ್ನು ಹಿಡಿದು ಪೊಲೀಸ ಇನ್ಸಪೆಕ್ಟರ ರವರು ಸದರಿ ವ್ಯಕ್ತಿಗಳ ಹೆಸರುಗಳನ್ನು ಕೇಳಲಾಗಿ ಬೈಕ ಚಾಲಕನ

ಹೆಸರು ಮಾರುತಿ ಹರಿಣಶಿಕಾರಿ ಮತ್ತು ಹಿಂದೆ ಕುಳಿತವನ ಹೆಸರು ಚಂದಪ್ಪ ಹರಿಣಶಿಕಾರಿ ಎಂದು ತಿಳಿಸಿದ್ದು ಚಾಲಕನ ಬೆನ್ನಿನಲ್ಲಿ ಒಂದು ಕಪ್ಪು ಬಣ್ಣದ ಬ್ಯಾಗ ಹಾಕಿಕೊಂಡಿದ್ದು ಹಿಂದೆ ಕುಳಿತವನು ಹಳದಿ ಬಣ್ಣದಕ್ಕೆ ಚೀಲ ಹಿಡಿದುಕೊಂಡಿದ್ದನು ಹಾಗೂ ಇನ್ಸಪೆಕ್ಟರ ರವರು ಸದರಿ ವ್ಯಕ್ತಿಗಳನ್ನು ನಿಮ್ಮ ಅಂಗ ಜಪ್ತಿ ಮಾಡಬೇಕಾಗಿದೆ ಪತ್ರಾಂಕಿತ ಅಧಿಕಾರಿಯ ಮುಂದು ಮಾಡಬೇಕೋ ಅಥವಾ ಮ್ಯಾಜಿಸ್ಟ್ರೇಟ ಮುಖಾಂತರ ಮಾಡಬೇಕೋ ಎಂದು ಕೇಳಲಾಗಿ ಅವರು ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬೇಕೊ ಎಂದು ತಿಳಿಸಿ, ಇನ್ಸಪೆಕ್ಟರ ರವರು ಮಾರುತಿ ಎನ್ನುವವನಿಗೆ ಪತ್ರ ನೀಡಿ ಆತನಿಂದ ಸಹಿ ಪಡೆದರು ಎಂದು ಸಾಕ್ಷ್ಯನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 19– ಫ್ರಾಸಾ–04 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ಮಾರುತಿ ಹರಿಣಶಿಕಾರಿಯ ಹತ್ತಿರ ಇದ್ದ ಬ್ಯಾಗ ಚೆಕ್ ಮಾಡಲಾಗಿ ಅದರಲ್ಲಿ ಘಾಟು ವಾಸನೆ ಬರುತ್ತಿದ್ದು ಅದರಲ್ಲಿ 2 ಪ್ಲಾಸ್ಟಿಕ ಬಂಡಲಗಳು ಇದ್ದವು, 2 ಬಂಡಲಗಳನ್ನು ತೂಕದ ಮಶೀನನಲ್ಲಿ ತೂಕ ಮಾಡಲಾಗಿ ಒಂದು ಬಂಡಲ 2 ಕೆ ಜಿ 31 ಗ್ರಾಂ ತೂಕದ ಗಾಂಜಾ ಇದ್ದವು ಹಾಗೂ ಇನ್ನೊಂದು ಪಾಕೇಟನಲ್ಲಿ 2 ಕೆ ಜಿ 20 ಗ್ರಾಂ ಗಾಂಜಾ ಇದ್ದವು ಮತ್ತು ಆರೋಪಿ ಮಾರುತಿಯ ಅಂಗ ಜಪ್ತಿ ಮಾಡಲಾಗಿ ಆತನಿಂದ ರೂ. 1000/– ಸಿಕ್ಕಿರುತ್ತವೆ ಎಂದು ಸಾಕ್ಷ್ಯನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 20– ಫ್ರಾಸಾ–04 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಇನ್ನೊಬ್ಬನ ಬ್ಯಾಗನ್ನು ಚೆಕ್ ಮಾಡಲಾಗಿ ಆತನ ಹತ್ತಿರ ಇದ್ದ ಬ್ಯಾಗನಲ್ಲಿದ್ದ ಬಂಡಲನ್ನು ತೂಕ ಮಾಡಲಾಗಿ ಅದರಲ್ಲಿ 1 ಕೆ ಜಿ 49 ಗ್ರಾಂ ತೂಕದ ಗಾಂಜಾ ಇದ್ದು , ಆರೋಪಿ ಮಾರುತಿಯ ಸ್ವಾದೀನದಲ್ಲಿದ್ದ ಗಾಂಜಾ ಬಂಡಲಗಳಿಂದ ತಲಾ 100 ಗ್ರಾಂ ಗಾಂಜಾವನ್ನು ಸ್ಯಾಂಪಲಗಾಗಿ ಪಡೆಯಲಾಯಿತು. ಇನ್ನೊಬ್ಬನ ಸ್ವಾದೀನದಲ್ಲಿದ್ದ ಗಾಂಜಾ ಬಂಡಲಗಳಿಂದ ತಲಾ 50 ಗ್ರಾಂ ಗಾಂಜಾವನ್ನು ಸ್ಯಾಂಪಲಗಾಗಿ ಪಡೆಯಲಾಯಿತು ಹಾಗೂ ಅಮಾನತುಪಡಿಸಿದ ಸ್ಯಾಂಪಲ ಗಾಂಜಾಗಳಿಗೆ ಜಿ ಎಂ ಎಫ್ –2 ಎಂಬ ಬೋಲ್ಟನಿಂದ ಸೀಲು ಮಾಡಿ ಉಳಿದ ಗಾಂಜಾಗಳನ್ನು ಪ್ಯಾಕ

ಮಾಡಿ ಅವುಗಳಿಗೆ ಆರ್–1 , ಆರ್ 2 ಮತ್ತು ಆರ್ 3 ಎಂದು ಗುರುತಿಸಿ ಸೀಲು ಮಾಡಲಾಯಿತು ಮತ್ತು ಆರೋಪಿಗಳ ಮೋಟಾರ ಸೈಕಲ ನಂಃ ಕೆಎ–26–ಇಡಿ–2911 ನ್ನು ಜಪ್ತಿ ಮಾಡಿದ್ದು, ಪೊಲೀಸರು ಎಲ್ಲ ವಸ್ತುಗಳನ್ನು ಅಮಾನತುಪಡಿಸಿಕೊಂಡು ಬರವಣಿಗೆ ಮಾಡಿ ತನ್ನ ಸಹಿ ಪಡೆದಿರುತ್ತಾರೆ ಹಾಗೂ ಪಂಚನಾಮೆ ಕಾಲಕ್ಕೆ ಸ್ಥಳದ ನಕಾಶೆ ತಯಾರಿಸಿದ್ದಾರೆ ಮತ್ತು ಫೋಟೊ ತೆಗೆದಿದ್ದಾರೆ ಹಾಗೂ ಆ ದಿನ ಅಮಾನತುಪಡಿಸಿದ ಮೋಟಾರ ಸೈಕಲನ ಫೋಟೊಗಳನ್ನು , ಸ್ಯಾಂಪಲ ಗಾಂಜಾಗಳನ್ನು, ರೂ. 1000 ವನ್ನು, 1 ನೇ ಆರೋಪಿ ಹತ್ತಿರ ಇದ್ದ ಕಪ್ಪು ಬಣ್ಣದ ಬ್ಯಾಗ ಮತ್ತು 2 ನೇ ಆರೋಪಿ ಹತ್ತಿರ ಇದ್ದ ಹಳದಿ ಬಣ್ಣದ ಬ್ಯಾಗಗಳನ್ನು ಮತ್ತು ಆರೋಪಿತರನ್ನು ಗುರುತಿಸುವುದಾಗಿ ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 21– ಫ್ರಾಸಾ–06 ಸಿದ್ದಪ್ಪ ಪೂಜಾರ ನಿರೀಕ್ಷಕರು ಕಾನೂನು ಮಾಪನ ಶಾಸ್ತ್ರ ಇಲಾಖೆ ಉಪ ವಿಭಾಗ , ಹುಬ್ಬಳ್ಳಿ ತಮ್ಮ ಸಾಕ್ಷ್ಯದಲ್ಲಿ, ದಿಃ 2–9–2020 ರಂದು ತಾನು ಕಚೇರಿಯಲ್ಲಿದ್ದಾಗ ಮೇಲಾಧಿಕಾರಿಗಳು ಸಬ ಅರ್ಬನ ಠಾಣೆಯಿಂದ ಒಂದು ಪತ್ರ ಬಂದಿದ್ದು ಸಬ ಅರ್ಬನ ಪೊಲೀಸಠಾಣೆಗೆ ಹೋಗಿ ಎಂದು ಹೇಳಿದ್ದು ಅದರಂತೆ ಾನು ತೂಕದ ಮಶೀನನೊಂದಿಗೆ ಠಾಣೆಗೆ 5 ಘಂಟೆಗೆ ಹೋಗಿದ್ದು ಠಾಣೆಯಲ್ಲಿ ಇನ್ಸಪೆಕ್ಟರ ರವರು ಇದ್ದು ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು, ಆರೋಪಿಗಳನ್ನು ಹಿಡಿದಲ್ಲಿ ಗಾಂಜಾ ತೂಕ ಮಾಡಿಕೊಡಬೇಕು ಎಂದು ತಿಳಿಸಿ ನೋಟೀಸು ನೀಡಿದ್ದು ಅದಕ್ಕೆ ಒಪ್ಪಿಕೊಂಡು ಸಹಿ ಮಾಡಿದ್ದೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 22– ಫ್ರಾಸಾ–06 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಸಂಜೆ 5.15 ಘಂಟೆಗೆ ತಾನು , ಪೊಲೀಸ ಸಿಬ್ಬಂದಿಯವರು ಒಂದು ಜೀಪನಲ್ಲಿ ಹಾಗೂ ಇನ್ನೊಂದು ಜೀಪನಲ್ಲಿ ಇನ್ಸಪೆಕ್ಟರ, ಪಂಚರು ಮತ್ತು ಪತ್ರಾಂಕಿತ ಅಧಿಕಾರಿ ಸೇರಿಕೊಂಡು ದೇಸಾಯಿ ಸರ್ಕಲ ಬಳಿ ಹೋಗಿ ಅಲ್ಲಿ ನಿಂತು ಗಮನಿಸಲಾಗಿ 5.50 ಘಂಟೆ ಸುಮಾರಿಗೆ ಒಂದು ಮೋಟಾರ

ಸೈಕಲ ಪಿಂಟೊ ಸರ್ಕಲ ಕಡೆಯಿಂದ ಬಂದಿದ್ದು ಐ ಬಿ ಕಡೆಗೆ ಸದರಿ ಮೋಟಾರ ಸೈಕಲ ಹೋಯಿತು, ಪೊಲೀಸರು ಹಿಡಿಯಲು ಪ್ರಯತ್ನಿಸಿದಾಗ ಸದರಿ ಮೋಟಾರ ಸೈಕಲ ಕಚ್ಚಾ ರಸ್ತೆಯ ಕಡೆ ಹೋಗಿದ್ದು ತಾವೆಲ್ಲರೂ ಹೋಗಿ ಸದರಿ ಮೋಟಾರ ಸೈಕಲ ಸವಾರರನ್ನು ಹಿಡಿದುಕೊಂಡು ಸದರಿ ವ್ಯಕ್ತಿಗಳ ಹೆಸರು ಕೇಳಲಾಗಿ ಮೋಟಾರ ಸೈಕಲ ಚಾಲಕನ ಹೆಸರು ಮಾರುತಿ ಕಲ್ಲಪ್ಪ ಹರಿಣಶಿಕಾರಿ ಮತ್ತು ಹಿಂಬದಿ ಸವಾರನ ಹೆಸರು ಚಂದಪ್ಪ ಸಿದ್ದಪ್ಪ ಹರಿಣಶಿಕಾರಿ ಎಂದು ಹೇಳಿದರು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 23– ಫ್ರಾಸಾ–06 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮೋಟಾರ ಸೈಕಲನಲ್ಲಿ ಕುಳಿತ ವ್ಯಕ್ತಿಯ ಬೆನ್ನಿನ ಹಿಂಬಾಗದಲ್ಲಿ ಒಂದು ಕಪ್ಪು ಬಣ್ಣದ ಚೀಲ ಇದ್ದು ಅದರಲ್ಲಿ ಎರಡು ಪ್ಲಾಸ್ಟಿಕ ಪಾಕೇಟಗಳು ಸಿಕ್ಕವು , ಸದರಿ ಪಾಕೇಟಗಳಿಂದ ಘಾಟು ವಾಸನೆ ಬರುತ್ತಿತ್ತು, ಪೊಲೀಸರು ಅದನ್ನು ತೂಕ ಮಾಡುವಂತೆ ತನಗೆ ತಿಳಿಸಿದ್ದು ಒಂದು ಪಾಕೇಟನ್ನು ತೂಕ ಮಾಡಲಾಗಿ ಅದರಲ್ಲಿ 2 ಕೆ ಜೆ 31 ಗ್ರಾಂ ತೂಕದ ಗಾಂಜಾ ಹಾಗೂ ಇನ್ನೊಂದು ಪ್ಲಾಸಿಕ ಪ್ಯಾಕನಲ್ಲಿ 2 ಕೆಜಿ 20 ಗ್ರಾಂ ತೂಕದ ಗಾಂಜಾ ಇತ್ತು ಹಾಗೂ ಹಿಂಬದಿ ಸವಾರನ ಹತ್ತಿರ ಹಳದಿ ಬ್ಯಾಗ ಇದ್ದು ಅದರಲ್ಲಿ ಒಂದು ಪ್ಲಾಸ್ಟಿಕ ಬ್ಯಾಗ ಇದ್ದು ಅದರಲ್ಲಿ ಗಾಂಜಾ ಇದ್ದು ಅದನ್ನು ತೂಕ ಮಾಡಲಾಗಿ 1 ಕೆ ಜಿ 49 ಗ್ರಾಂ ತೂಕದ ಗಾಂಜಾ ಇತ್ತು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 24– ಫ್ರಾಸಾ–06 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 1 ನೇ ಆರೋಪಿಯ ತಾಬಾದಲ್ಲಿದ್ದ ಪಾಕೇಟಗಳಿಂದ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದುಕೊಳ್ಳಲಾಯಿತು ಮತ್ತು ಅದನ್ನು ಪ್ಯಾಕ ಮಾಡಿ ಸೀಲ ಮಾಡಲಾಯಿತು. ಉಳಿದ ಗಾಂಜಾವನ್ನು ಸಹ ಪ್ರತ್ಯೇಕವಾಗಿ ಪ್ಯಾಕ ಮಾಡಲಾಯಿತು ಹಾಗೂ 1 ನೇ ಆರೋಪಿಯ ತಾಬಾದಿಂದ 1000 ರೂ ಹಣವನ್ನು ಅಮಾನತುಪಡಿಸಿಕೊಳ್ಳಲಾಯಿತು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 25– ಫ್ರಾಸಾ–06 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 2 ನೇ ಆರೋಪಿತನ ತಾಬಾದಿಂದ ದೊರೆತ ಗಾಂಜಾದಿಂದ 50 ಗ್ರಾಂಜಾವನ್ನು ಮಾದರಿಗಾಗಿ ಪಡೆದು ಪಾಕ ಮಾಡಿ ಸೀಲ ಮಾಡಲಾಯಿತು ಹಾಗೂ ಉಳಿದ ಗಾಂಜಾವನ್ನು ಸಹ ಪ್ಯಾಕ ಮಾಡಲಾಯಿತು ಮತ್ತು ಆರೋಪಿ–1 ಮತ್ತು 2 ರವರ ಹತ್ತಿರ ಇದ್ದ ಬ್ಯಾಗನ್ನು, ಮೋಟಾರ ಸೈಕಲನ್ನು ಸಹ ಜಪ್ತಿಪಡಿಸಿಕೊಳ್ಳಲಾಯಿತು ಹಾಗೂ ವಶಪಡಿಸಿಕೊಂಡ ವಸ್ತುಗಳ ಮೇಲೆ ಪೊಲೀಸ ಇನ್ಸಪೆಕ್ಟರ , ಪತ್ರಾಂಕಿತ ಅಧಿಕಾರಿ ಮತ್ತು ಪಂಚರ ಸಹಿವುಳ್ಳ ಚೀಟಿ ಅಂಟಿಸಲಾಯಿತು ಹಾಗೂ ಸ್ಥಳದಲ್ಲಿ 6.15 ರಿಂದ 8.15 ರ ವರೆಗೆ ಪಂಚನಾಮೆ ಬರೆದು ಫೋಟೊ ತೆಗೆಯಲಾಯಿತು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 26– ಫ್ರಾಸಾ–06 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಜಪ್ತಿ ಮಾಡಿದ ಮೋಟಾರ ಸೈಕಲನ ಫೋಟೊ, ವಸ್ತುಗಳನ್ನು , ರೂ. 1000/– ಹಣವನ್ನು ಮತ್ತು ಆರೋಪಿ ಮಾರುತಿ ಮತ್ತು ಚಂದಪ್ಪ ಹರಿಣಶಿಕಾರಿ ರವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 27– ಫ್ರಾಸಾ–07 ನಾಗಪ್ಪ ಬೀರಣ್ಣವರ ಪಿಸಿ , ತಮ್ಮ ಸಾಕ್ಷ್ಯದಲ್ಲಿ, ದಿಃ 2–9–2020 ರಂದು ತಾನು ಠಾಣೆಯಲ್ಲಿದ್ದಾಗ 4 ಘಂಟೆ ಸುಮಾರಿಗೆ ಪೊಲೀಸ ಇನ್ಸಪೆಕ್ಟರ ರವರು ತನಗೆ ಮತ್ತು ತಮ್ಮ ಸಿಬ್ಬಂದಿಗೆ ದೇಸಾಯಿ ಸರ್ಕಲ ಕಡೆಗೆ ಮೋಟಾರ ಸೈಕಲನಲ್ಲಿ ಗಾಂಜಾ ಮಾರಾಟ ಮಾಡುವ ವ್ಯಕ್ತಿಗಳು ಹೊರಟಿದ್ದಾರೆಂದು ಮಾಹಿತಿ ಬಂದಿದ್ದು ಅದರಂತೆ ದಾಳಿಗೆ ಹೋಗಬೇಕಾಗಿದೆ ಎಂದು ತಿಳಿಸಿದ್ದು, ಅಧಿಕಾರಿಗಳು ಎಚ್ ಸಿ 1628 ರವರಿಗೆ ಇಬ್ಬರು ಸರ್ಕಾರಿ ಪಂಚರನ್ನು ಕರೆತರಲು ಹೇಳಿ ತಹಶೀಲ್ದಾರ ಕಚೇರಿಗೆ ಕಳುಹಿಸಿದ್ದು , ಅದರಂತೆ ಇಬ್ಬರು ಪಂಚರನ್ನು ಸದರಿ ಸಿಬ್ಬಂದಿ ಕರೆದುಕೊಂಡು ಬಂದ ನಂತರ ಪತ್ರಾಂಕಿತ ಅಧಿಕಾರಿ ಮತ್ತು ತೂಕ ಮಾಡುವ ವ್ಯಕ್ತಿಯನ್ನು ಕರೆತರುವಂತೆ ಸಿಬ್ಬಂದಿಯವರನ್ನು ಮೂಲಕ

ಕಳುಹಿಸಿ, ಪಿ ಐ ರವರು ಪಂಚರಿಗೆ , ಪತ್ರಾಂಕಿತ ಅಧಿಕಾರಿಗೆ ನೋಟೀಸು ಅವರಿಂದ ಒಪ್ಪಿಗೆ ಪಡೆದಿರುತ್ತಾರೆ ಎಂದು ಸಾಕ್ಷ್ಯನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 28– ಫ್ರಾಸಾ–07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಕೆಎ–25–ಜಿ–409 ಸರ್ಕಾರಿ ಜೀಪನಲ್ಲಿ ಪಂಚರು ಪತ್ರಾಂಕಿತ ಅಧಿಕಾರಿ , ಪಿ ಐ ರವರು ಹಾಗೂ ಕೆಎ–25–ಜಿ–652 ಇನ್ನೊಂದು ವಾಹನದಲ್ಲಿ ತೂಕ ಮಾಡುವ ವ್ಯಕ್ತಿ ಮತ್ತ ಸಿಬ್ಬಂದಿ ಸೇರಿಕೊಂಡು ಹಾಗೂ ಇನ್ನುಳಿದ ಸಿಬ್ಬಂದಿ ಮೊಟಾರ ಸೈಕಲನಲ್ಲಿ ಸಂಜೆ 5 ಘಂಟೆಗೆ ಠಾಣೆಯನ್ನು ಬಿಟ್ಟು ದೇಸಾಯಿ ಸರ್ಕಲ ಹತ್ತಿರ ನಿಂತು ಗಮನಿಸುತ್ತಿದ್ದು, ಇನ್ನಿಬ್ಬರು ಸಿಬ್ಬಂದಿ ಎಚ್ 1628 ಹಾಗೂ 1563 ರವರು ಐ ಬಿ ಕ್ರಾಸ ಹತ್ತಿರ ನಿಂತು ಗಮನಿಸುತ್ತಿದ್ದು , ಇಬ್ಬರು ವ್ಯಕ್ತಿಗಳು ಮೋಟಾರ ಸೈಕಲನಲ್ಲಿ ಪಿಂಟೋ ಸರ್ಕಲದಿಂದ ದೇಸಾಯಿ ಸರ್ಕಲ ಕಡೆಗೆ ಬರುತ್ತಿದ್ದರು ಪೊಲೀಸ ಇನಸಪೆಕ್ಟರ ರವರು ಕೈ ತೋರಿಸಿ ವಾಹನ ನಿಲ್ಲಿಸಲು ಸೂಚನೆ ಕೊಟ್ಟರು ಅದರೆ ಮೋಟಾರ ಸೈಕಲನವರು ತಪ್ಪಿಸಿಕೊಂಡು ತಮ್ಮ ಮೋಟಾರ ಸೈಕಲ ತೆಗೆದುಕೊಂಡು ದೇಸಾಯಿ ಕ್ರಾಸ ದಾಟಿ ಹೋಗಿದ್ದು ಅಲ್ಲಿದ್ದ ಸಿಬ್ಬಂದಿ 1628 ಮತ್ತು 1563 ರವರು ಸದರಿ ಮೋಟಾರ ಸೈಕಲನ್ನು ತಡೆಯಲು ಪ್ರಯತ್ನಿಸಿದಾಗ ಮೋಟಾರ ಸೈಕಲ ಸವಾರರು ಅವರನ್ನೂ ಸಹ ತಪ್ಪಿಸಿಕೊಂಡು ಚರ್ಚ ಕಂಪೌಂಡ ಹತ್ತಿರ ಹೋಗಿದ್ದು ಆದರೆ ಮುಂದೆ ದಾರಿ ಇಲ್ಲದ ಕಾರಣ ಮುಂದೆ ಹೋಗಲು ಆಗಲಿಲ್ಲ, ಆಗ ಸಿಬ್ಬಂದಿಯವರು ಸದರಿ ಮೋಟಾರ ಸೈಕಲ ಸವಾರರನ್ನು ಹಿಡಿದರು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 29– ಫ್ರಾಸಾ–07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪಿ ಐ ರವರು ಸದರಿ ಇಬ್ಬರು ವ್ಯಕ್ತಿಗಳಿಗೆ ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿರುತ್ತದೆ ತಮ್ಮ ತಪಾಸಣೆ ಮಾಡಬೇಕಾಗಿ ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬೇಕೋ ಅಥವಾ ಮ್ಯಾಜಿಸ್ಟ್ರೇಟ ಮುಂದೆ ಮಾಡಬೇಕೋ ಎಂದು ವಿಚಾರಿಸಲಾಗಿ 1 ನೇ ಆರೋಪಿ ಮಾರುತಿ ಪತ್ರಾಂಕಿತ ಅಧಿಕಾರಿಯ ಮುಂದೆ ತಪಾಸಣೆ ಮಾಡಬಹುದು ಎಂದು ಹೇಳಿದನು ಹಾಗೂ ಪಿ ಐ ರವರು ಸದರಿ ವ್ಯಕ್ತಿಗಳ ಹೆಸರು ವಿಚಾರಿಸಲಾಗಿ ಅವರಲ್ಲಿ ಒಬ್ಬ ಮಾರುತಿ ಹರಿಣಶಿಕಾರಿ ಮತ್ತು ಇನ್ನೊಬ್ಬ ಚಂದಪ್ಪ ಹರಿಣಶಿಕಾರಿ ಎಂದು ತಿಳಿಸಿದ್ದು ಪತ್ರಾಂಕಿತ ಅಧಿಕಾರಿಯು

ತನ್ನ ಮತ್ತು ತಮ್ಮ ಹತ್ತಿರ ಯಾವುದೇ ಮಾದಕ ವಸ್ತುಗಳ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡರು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 30– ಫ್ರಾಸಾ–07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 1 ನೇ ಆರೋಪಿ ಹತ್ತಿರ ಇದ್ದ ಕಪ್ಪುಬಣ್ಣದ ಬ್ಯಾಗನ್ನು ತೆಗೆದು ನೋಡಲಾಗಿ ಸದರಿ ಬ್ಯಾಗನಲ್ಲಿ 2 ಬಂಡಲಗಳು ಇದ್ದು ಅದರಲ್ಲಿ ಘಾಟು ವಾಸನೆ ಬರುವ ಗಾಂಜಾ ಇತ್ತು, ಅದರಲ್ಲಿ ಬೀಜ ಮತ್ತು ಎಲೆಗಳು ಇದ್ದು ತೂಕ ಮಾಡುವ ವ್ಯಕ್ತಿಯಿಂದ ಸದರಿ ಗಾಂಜಾವನ್ನು ತೂಕ ಮಾಡಲಾಗಿ ಒಂದು ಬಂಡಲನಲ್ಲಿ 2 ಕೆ ಜಿ 31 ಗ್ರಾಂ ತೂಕದ ಗಾಂಜಾ ಹಾಗೂ ಇನ್ನೊಂದು 2 ಕೆ ಜಿ 2 0 ಗ್ರಾಂ ತೂಕದ ಗಾಂಜಾ ಇದ್ದು ಸದರಿ ಪಾಕೇಟನಿಂದ ತಲಾ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆಯಲಾಯಿತು ಹಾಗೂ ಸದರಿ ಮಾದರಿ ಗಾಂಜಾವನ್ನು ಬಟ್ಟೆ ಚೀಲದಲ್ಲಿ ಹಾಕಿ ಪ್ಯಾಕ ಮಾಡಿ ಜೆ ಎಂ ಎಫ–ಎ 2 ಎಂಬ ಬೋಲ್ಟನಿಂದ ಸೀಲು ಮಾಡಿ ಪ್ಯಾಕನ ಮೇಲೆ ಪಂಚರು , ಪತ್ರಾಂಕಿತ ಅಧಿಕಾರಿ ಹಾಗೂ ಪಿ ಐ ರವರ ಸಹಿ ಇರುವ ಚೀಟಿ ಅಂಟಿಸಿದ್ದು , ಉಳಿದ ಗಾಂಜಾವನ್ನು ಬಿಳಿ ಬಟ್ಟೆಯಿಂದ ಪ್ಯಾಕ ಮಾಡಿ ಆರ–1 , ಆರ್–2 ಎಂದು ಗುರುತಿಸಲಾಯಿತು. ಸ್ಯಾಂಪಲ ಗಾಂಜಾವನ್ನು ಎಸ್ –1 ಮತ್ತು ಎಸ್–2 ಎಂದು ಗುರುತಿಸಲಾಯಿತು ಹಾಗೂ ಸದರಿ ವ್ಯಕ್ತಿಯನ್ನು ತಪಾಸಣೆ ಮಾಡಲಾಗಿ ಆತನಿಂದ 1000 ರೂ ಹಾಗೂ ಕಪ್ಪು ಬಣ್ಣದ ಕಾಲೇಜ ಬ್ಯಾಗ ದೊರೆತಿರುತ್ತವೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 31– ಫ್ರಾಸಾ–07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 2 ನೇ ಆರೋಪಿಯ ತಪಾಸಣೆ ಮಾಡಲಾಗಿ ಅತನ ಬಳಿ ಒಂದು ಹಳದಿ ಚೀಲ ಇದ್ದು ಅದರಲ್ಲಿ ಪ್ಲಾಸ್ಟಿಕ ಪಾಕೇಟ ಇದ್ದು ಅದರಲ್ಲಿ ಎಲೆ ಮತ್ತು ಬೀಜ ಇರುವ ಗಾಂಜಾ ಇತ್ತು. ಅದನ್ನು ತೂಕ ಮಾಡುವ ವ್ಯಕ್ತಿಯಿಂದ ತೂಕ ಮಾಡಿಸಲಾಗಿ ಅದು 1 ಕೆ ಜಿ 49 ಗ್ರಾಂ ತೂಕ ಇತ್ತು. ಅದರಿಂದ 50 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದು ಬಟ್ಟೆ ಚೀಲದಲ್ಲಿ ಹಾಕಿ ಸೀಲು ಮಾಡಿ ಚೀಲದಲ್ಲಿ ಹಾಕಿ ಪ್ಯಾಕ ಮಾಡಿ ಜೆ ಎಂ ಎಫ–ಎ 2 ಎಂಬ ಬೋಲ್ಟನಿಂದ ಸೀಲು ಮಾಡಲಾಯಿತು ಹಾಗೂ ಸ್ಯಾಂಪಲ ಗಾಂಜಾವನ್ನು ಎಸ್–3 ಎಂದು ಉಳಿದ ಗಾಂಜಕ್ಕೆ

ಆರ್ -3 ಎಂದು ಗುರುತು ನೀಡಿ ಸದರಿ ಪ್ಯಾಕನ ಮೇಲೆ ಪಂಚರು , ಪತ್ರಾಂಕಿತ ಅಧಿಕಾರಿ ಹಾಗೂ ಪಿ ಐ ರವರ ಸಹಿ ಇರುವ ಚೀಟಿ ಅಂಟಿಸಲಾಯಿತು ಮತ್ತು ಆತನ ಕೈಯಲ್ಲಿದ್ದ ಹಳದಿ ಬಣ್ಣದ ಬ್ಯಾಗನ್ನು ಮತ್ತು ಮೋಟಾರ ಸೈಕಲನ್ನು ಜಪ್ತಿ ಮಾಡಲಾಯಿತು ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 32- ಫ್ರಾಸಾ-07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಮಾನತುಪಡಿಸಿದ ವಸ್ತುಗಳ ಮೇಲೆ ಹಾಕಿದ ಸೀಲ ನಲ್ಲ ಬೋಲ್ಟನ್ನು ಮಹೇಶ ಇಬ್ರಾಹಿಂ ರವರಿಗೆ ನೀಡಿದ್ದು ಸ್ಥಳದಲ್ಲಿ ಸಂಜೆ 6 ರಿಂದ 8 ಘಂಟೆ ವರೆಗೆ ಪಂಚನಾಮೆ ಬರೆದು ಫೋಟೊಗಳನ್ನು ಸಿಬ್ಬಂದಿ ಮುಲ್ಲಾ ರವರು ತೆಗೆದಿರುತ್ತಾರೆ ಮತ್ತು ಅಮಾನತುಪಡಿಸಿದ ಮಾದರಿ ಗಾಂಜಾ , ಕಪ್ಪು ಬಣ್ಣದ ಬ್ಯಾಗ ,ಹಳದಿ ಬಣ್ಣದ ಬ್ಯಾಗ ಮತ್ತು 1000 ರೂ ಹಣವನ್ನು, ಜಪ್ತಿ ಮಾಡಿದ ಮೋಟಾರ ಸೈಕಲನ ಫೋಟೊ ನೋಡಿ ಗುರುತಿಸುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 33- ಫ್ರಾಸಾ-07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿತರು, ಮುದ್ದೆಮಾಲುಗಳ ಮತ್ತು ತನಿಖಾಧಿಕಾರಿಗಳು ಠಾಣೆಗೆ ವಾಪಸಾಗಿ ದೂರನ್ನು ನೀಡಿದ್ದು ತಾನು ಆ ದಿನ ದಾಳಿ ಮಾಡಿದ ಹಿಡಿದ ಆರೋಪಿ 1 ಮತ್ತು 2 ರವರನ್ನು ಗುರುತಿಸುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 34- ಫ್ರಾಸಾ-07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 11-9-2020 ರಂದು ಪಿ ಐ ವರು 1 ನೇ ಆರೋಪಿತನನ್ನು ಪೊಲೀಸ ವಶಕ್ಕೆ ಪಡೆದುಕೊಂಡು ಆತನ ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದು ಆತನು ತನ್ನ ಹೇಳಿಕೆಯನ್ನು ತನಗೆ ಗಾಂಜಾ ಸಪ್ಲೆ ಮಾಡುತ್ತಿದ್ದ ವ್ಯಕ್ತಿಯನ್ನು ಕರೆದುಕೊಂಡು ಹೋದರೆ ತೋರಿಸುವುದಾಗಿ ಮತ್ತು ತಾನು ಉಪಯೋಗಿಸಿದ ಮೊಬೈಲನ್ನು ಪಿಂಟೊ ಸರ್ಕಲ ಹತ್ತಿರ ಶೇಖ ಎನ್ನುವವರ ಖುಲ್ಲಾ ಜಾಗದಲ್ಲಿ ಬಚ್ಚಿಟ್ಟಿರುವುದಾಗಿ ಕರೆದುಕೊಂಡು ಹೋದರೆ ತೋರಿಸುವುದಾಗಿ ಹೇಳಿದ್ದು 1 ನೇ ಆರೋಪಿಯು ಪಿ ಐ ರವರು ಪಂಚರನ್ನು ಕರೆದುಕೊಂಡು ಪಿಂಟೋ ಸರ್ಕಲ

ಹತ್ತಿರ ಶೇಖ ಎನ್ನುವವರ ಖುಲ್ಲಾ ಜಾಗಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕಂಟಿಯ ಕೆಳಗೆ ಇಟ್ಟಿದ್ದ ರೆಡ್ ಮಿ ಮೊಬೈಲನ್ನು ತೆಗೆದು ಹಾಜರುಪಡಿಸಿದ್ದು ಪಿ ಎಸ್ ಐ ರವರು ಸದರಿ ಮೊಬೈಲನ್ನು ಜಪ್ತಿ ಮಾಡಿ ವಶಕ್ಕೆ ಪಡೆದಿದ್ದು ಆ ಬಗ್ಗೆ ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 5 ರಿಂದ 5.45 ಘಂಟೆ ವರೆಗೆ ಬರೆಯಲಾಯಿತು ಮತ್ತು. ಸದರಿ ಮೊಬೈಲನ ಮೇಲೆ ತನ್ನ ,ಪಂಚರ , ತನಿಖಾಧಿಕಾರಿಗಳ ಸಹಿ ಇರುವ ಚೀಟಿ ಅಂಟಿಸಲಾಯಿತು ಹಾಗೂ ಸ್ಥಳದಲ್ಲಿ ಕಚ್ಚಾ ನಕ್ಷೆ ತೆಗೆಯಲಾಯಿತು ಮತ್ತು ಫೋಟೊ ತೆಗೆಯಲಾಯಿತು., ನಂತರ ಆರೋಪಿಯನ್ನು ಕರೆದುಕೊಂಡು ಮುದ್ದೆಮಾಲು ಸಮೇತ ಠಾಣೆಗೆ ವಾಪಸಾಗಿದ್ದೇನೆ ಎಂದು ಸಾಕ್ಷ್ಯನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 35– ಫ್ರಾಸಾ–07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 15–9–2020 ರಂದು 1 ನೇ ಆರೋಪಿತನ ಹೇಳಿಕೆ ಮೇರೆಗೆ ತನಗೆ ಗಾಂಜಾ ಸಪ್ಲೆ ಮಾಡುತ್ತಿದ್ದ 3 ನೇ ಆರೋಪಿ ಅಬ್ದುಲ ರಜಾಕ ಗದ್ದನಕೇರಿ ಕ್ರಾಸ ಹತ್ತಿರ ಇದ್ದಾನೆ ಎಂದು ತಿಳಿದು ಬಂದಿದ್ದು , ಕೂಡಲೇ ಇಬ್ಬರು ಪಂಚರು ಹಾಗೂ ತೂಕ ಮಾಡುವ ವ್ಯಕ್ತಿಯನ್ನು ಕರೆಸಿದ್ದು , ಸಂಜೆ 7 ಘಂಟೆಗೆ ತನಿಖಾಧಿಕಾರಿ , ಸಿಬ್ಬಂದಿ 1676, 2715 ಹಾಗೂ ಸಿಬ್ಬಂದಿ ಸೇರಿ ಪಂಚರು ಹಾಗೂ ತೂಕ ಮಾಡುವ ವ್ಯಕ್ತಿ ಸೇರಿಕೊಂಡು ಟವೇರಾ ವಾಹನದಲ್ಲಿ ಹೊರಟು 10 ಘಂಟೆಗೆ ಸ್ಥ,ಳ ತಲುಪಿದೆವು. ಅಲ್ಲಿ ಮಹಾರಾಷ್ಟ್ರ ನೊಂದಣಿ ಸಂಃ ಎಂ ಎಚ್ 11–ಎಎ–2345 ಬಿಳಿ ಬಣ್ಣದ ಕಾರನ್ನು ವಾಚ ಮಾಡುತ್ತ ನಿಂತಿದ್ದು ಸದರಿ ವಾಹನ ಬಂದಿದ್ದು, ತನಿಖಾಧಿಕಾರಿ ಸದರಿ ವಾಹನಕ್ಕೆ ನಿಲುಗಡೆ ಸೂಚನೆ ನೀಡಿ ನಿಲ್ಲಿಸಿದ್ದು ತನಿಖಾಧಿಕಾರಿ ಸದರಿ ಗಾಡಿ ಚಾಲಕನಿಗೆ ನೀನು ಗಾಂಜಾ ಸಪ್ಲೆಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದೆ ಎಂದು ಹೇಳಿ ಆತನ ಹೆಸರು ವಿಚಾರಿಸಲಾಗಿ ಆತ ತನ್ನ ಹೆಸರು ಅಬ್ದುಲ ರಜಾಕ ಎಂದು ತಿಳಿಸಿದನು ಎಂದು ಸಾಕ್ಷ್ಯನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 36– ಫ್ರಾಸಾ–07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಸದರಿ ವ್ಯಕ್ತಿ ತನ್ನ ಕಾರನ ಡಿಕ್ಕಿ ತೆರೆದು ನೋಡಲಾಗಿ ಅದರಲ್ಲಿ ಎಲೆ, ಬೀಜ ಇರುವ ಗಾಂಜಾ ಇದ್ದು ರಮೇಶ ಅಮ್ಮಿನಬಾವಿ ಎಂಬ ವ್ಯಕ್ತಿಯ ಸಹಾಯದಿಂದ ಸದರಿ ಗಾಂಜಾ ತೂಕ ಮಾಡಲಾಗಿ ಅದು

1 ಕೆ ಜಿ 10 ಗ್ರಾಂತ ತೂಕ ಇತ್ತು ಮತ್ತು ಸದರಿ ವ್ಯಕ್ತಿ ಗಾಂಜಾ ಮಾರಾಟ ಬಂದ ಹಣ 1500 ಹಣ ಹಾಜರುಪಡಿಸಿದನು, ಅಲ್ಲದೇ ಕೃತ್ಯಕ್ಕೆ ಉಪಯೋಗಿಸಿದ ಒಂದು ಸ್ಯಾಮಸಂಗ ಮೊಬೈಲನ್ನು ಹಾಜರುಪಡಿಸಿರುತ್ತಾನೆ ಮತ್ತು ಸದರಿ ಗಾಂಜಾ ಪಾಕೇಟನಿಂದ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದು ಅದರ ಮೇಲೆ ಟಿ ವಿ ಎಸ್ 8.8 ಎಂಬ ಬೋಲ್ಟನಿಂದ ಸೀಲು ಮಾಡಿ ಮಾದರಿ ಗಾಂಜಾವನ್ನು ಎಸ್-1 ಎಂದು ಉಳಿದ ಗಾಂಜಾವನ್ನು ಆರ್-1 ಎಂದು ಗುರುತಿಸಲಾಯಿತು ಹಾಗೂ ಸದರಿ ವಸ್ತುಗಳ ಮೇಲೆ ಪಂಚರ ಸಹಿ ಇರುವ ಚೀಟಿ ಅಂಟಿಸಲಾಯಿತು ಹಾಗೂ ಕಾರನ್ನು ಸಹ ಅಮಾನತುಪಡಿಸಿಕೊಂಡು ಸ್ಥಳದಲ್ಲಿ ಮಧ್ಯಾಹ್ನ 1 ರಿಂದ 3 ಘಂಟೆ ವರೆಗೆ ಪಂಚನಾಮೆ ಬರೆದು ದಸ್ತೂರ ಎಂದು ಸಹಿ ಮಾಡಿರುತ್ತೇನೆ ಮತ್ತು ಪಂಚನಾಮೆ ಕಾಲಕ್ಕೆ ಸಿಬ್ಬಂದಿ ಬಿ ಎಂ ಹೆದ್ದೇರಿ ರವರು ಫೋಟೊ ತೆಗೆದಿರುತ್ತಾರೆ ಮತ್ತು ಅಮಾನತುಪಡಿಸಿದ ವಾಹನವನ್ನು ನೋಡಿದರೆ ಗುರುತಿಸುವುದಾಗಿ ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 37- ಫ್ರಾಸಾ-07 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ಮುದ್ದೆಮಾಲು ಸಮೇತ ಠಾಣೆಗೆ ವಾಪಸಾಗಿರುತ್ತೇವೆ ಮತ್ತು 3 ನೇ ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ ಹಾಗೂ 3 ನೇ ಆರೋಪಿಗೆ ಗಾಂಜಾ ಮಾರಾಟ ಮಾಡುತ್ತಿದ್ದ ಚಂದ್ರಕಾಂತ ಅಲಿಯಾಸ ಪಪ್ಪು ಚವ್ಹಾಣ ಈತನು ಪರಪ್ಪನ ಅಗ್ರಹಾರದಲ್ಲಿ ಬೇರೆ ಪ್ರಕರಣದಲ್ಲಿ ಜೈಲುವಾಸಿಯಾಗಿದ್ದು ಆತನನ್ನು ಪೊಲೀಸ ವಶಕ್ಕೆ ಪಡೆದುಕೊಂಡು ಆತನನ್ನು ತನಗೆ ತೋರಿಸಿದ್ದು ಆತನ ವಿಚಾರಣೆ ಮಾಡಿದಾಗ ತಾನು 3 ನೇ ಆರೋಪಿಗೆ ಗಾಂಜಾ ಸಪ್ಲೆ ಮಾಡುತ್ತಿರುವುದಾಗಿ ಹೇಳಿದನು ಮತ್ತು ಸದರಿ ಗಾಂಜಾವನ್ನು ಗುಲಬರ್ಗಾ ಮತ್ತು ಬೆಂಗಳೂರು ಹೈವೆಯಲ್ಲಿ ಕೊಡುತ್ತಿರುವುದಾಗಿ ಹೇಳಿದನು ಮತ್ತು 3 ನೇ ಆರೋಪಿ ಗಾಂಜಾವನ್ನು ಖರೀದಿ ಮಾಡಿ ಹಣವನ್ನು 4 ನೇ ಆರೋಪಿಯ ಎಕ್ಸಿಸ್ ಬ್ಯಾಂಕ ಖಾತೆಗೆ ಫೋನ ಮೂಲಕ ಜಮಾ ಮಾಡುತ್ತಿರುವುದಾಗಿ ಹೇಳಿದನು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 38- ಫ್ರಾಸಾ-11 ಮಂಜುನಾಥ ದೊಡ್ಡಮನಿ ಸಹಾಯಕ ಅಭಿಯಂತರರು , ಹೆಸ್ಕಾಂ ಹುಬ್ಬಳ್ಳಿ ತಮ್ಮ ಸಾಕ್ಷ್ಯದಲ್ಲಿ, ದಿಃ 11-10-2021 ರಂದು ಹುಬ್ಬಳ್ಳಿ ಉಪ ನಗರ ಪೋಲಿಸಠಾಣೆಯ ಸಹಾಯಕ ಪೋಲೀಸ ಆಯುಕ್ತರು ತಮಗೆ ಒಂದು ಪತ್ರ ಬರೆದು ದಿಃ 2-9-2020 ರಂದು ಹುಬ್ಬಳ್ಳಿಯ ದೇಶಪಾಂಡೆನಗರದ ಅಸೆನ್ಸನ್ ಚರ್ಚ ಹತ್ತಿರ ಸಂಜೆ 6 ರಿಂದ ರಾತ್ರಿ 8 ಗಂಟೆ ವರೆಗೂ ವಿದ್ಯುತ್ ಸರಬರಾಜು ಇದ್ದಿತೋ ಇಲ್ಲವೋ ಎಂಬ ಬಗ್ಗೆ ಮಾಹಿತಿ ನೀಡುವಂತೆ ಕೋರಿದ್ದು ಸದರಿ ಪತ್ರಕ್ಕೆ ನಾನುದಿಃ 13-11-2021 ರಂದು ಉತ್ತರ ಬರೆದು, ದಿಃ 2-9-2020 ರಂದು ಹುಬ್ಬಳ್ಳಿಯ ದೇಶಪಾಂಡೆನಗರದ ಅಸೆನ್ಸನ್ ಚರ್ಚ ಹತ್ತಿರ ಸಂಜೆ 6 ರಿಂದ ರಾತ್ರಿ 8 ಗಂಟೆ ವರೆಗೂ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗಿರುವುದಿಲ್ಲ ಎಂದು ತಿಳಿಸಿರುತ್ತೇನೆ ಹಾಗೂ 33/11 ಕೆ ವಿ ವಿಧ್ಯುತ್ ಉಪ ಕೇಂದ್ರ ಕಿಮ್ಸ ಹುಬ್ಬಳ್ಳಿಯಿಂದ ಸರಬರಾಜಾಗುವ ಫೀಡರನ ದಾಖಲೆಗಳ ಆಧಾರದ ಮೇಲೆ ತಾನು ಸದರಿ ಮಾಹಿತಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 39- ಫ್ರಾಸಾ-12 ಹೆಚ್ ಕೊಟ್ರೇಶ ಸಹಾಯಕ ರಾಸಾಯನಿಕ ಪರೀಕ್ಷಕರು , ಪ್ರಾದೇಶಿಕ ಪ್ರಯೋಗಾಲಯ , ಧಾರವಾಡ ತಮ್ಮ ಸಾಕ್ಷ್ಯದಲ್ಲಿ, ದಿಃ 5-9-2020 ರಂದು ಪೋಲೀಸ ಉಪನಿರೀಕ್ಷಕರು ಎಲ್ ಆ್ಯಂಡ್ ಓ ಸಬ ಅರ್ಬನ ಪೋಲಿಸಠಾಣೆ ಹುಬ್ಬಳ್ಳಿರವರು ಈ ಪ್ರಕರಣದ 3 ಸೀಲು ಮಾಡಿದ ಮಾದರಿ ಗಾಂಜಾ ಪ್ಯಾಕೇಟಗಳನ್ನು ಮನವಿ ಪತ್ರದೊಂದಿಗೆ ಪೇದೆ 2691 ರವರ ಮೂಲಕ ಕಳುಹಿಸಿಕೊಟ್ಟಿದ್ದು ಮಾದರಿ ಸೀಲು ಹಾಗೂ ಮಾದರಿ ಗಾಂಜಾದ ಮೇಲಿದ್ದ ಸೀಲು ಸುಸ್ಥಿತಿಯಲ್ಲಿದ್ದು ಒಂದಕ್ಕೊಂದು ತಾಳೆಯಾಗುತ್ತಿತ್ತು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 40- ಫ್ರಾಸಾ-12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 10-9-2020 ರಂದು 100 ಗ್ರಾಂ ಗಾಂಜಾ ಹಾಗೂ 50 ಗ್ರಾಂ ಗಾಂಜಾ ಇದ್ದ ಮಾದರಿ ಗಾಂಜಾವನ್ನು ಭೌತಿಕ

ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಎಲೆಗಳು, ಹೂವು, ಮೊಗ್ಗು ಇದ್ದುದು ಕಂಡುಬಂದಿದ್ದು ಅವುಗಳ ಬಣ್ಣ ತುಕ್ಕು ಹಿಡಿದ ಕಬ್ಬಿಣದ ಬಣ್ಣಕ್ಕೆ ಹೋಲಿಕೆಯಾಗುತ್ತಿತ್ತು ಮತ್ತು ಗಾಂಜಾದ ಘಾಟು ವಾಸನೆಯಿಂದ ಕೂಡಿತ್ತು ಹಾಗೂ ಸೂಕ್ಷ್ಮದರ್ಶಕ ಯಂತ್ರದ ಮೂಲಕ ಪರೀಕ್ಷಿಸಿದಾಗ ಅದರಲ್ಲಿ ಗಾಂಜಾದ ಹೇರ್ ಗಳು ಕಂಡುಬಂದಿದ್ದು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಅದು ಗಾಂಜಾದ ಗುಣಲಕ್ಷಣಗಳ ಧನಾತ್ಮಕ ಫಲಿತಾಂಶ ನೀಡಿರುತ್ತದೆ ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಮೇಲಿನ ಎಲ್ಲ ಪರೀಕ್ಷೆಗಳಲ್ಲಿ ತನಗೆ ಕಳುಹಿಸಿದ ಮಾದರಿ ಗಾಂಜಾದ ಗುಣಲಕ್ಷಣಗಳಿಂದ ಕೂಡಿದ್ದು ಈ ಬಗ್ಗೆ ನಿಶಾನೆ ಪಿಃ 79 ರಂತೆ ಪ್ರಮಾಣಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 41- ಪ್ರಾಸಾ-12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 18-9-2020 ರಂದು ಪೋಲೀಸ ಉಪನಿರೀಕ್ಷಕರು ಎಲ್ ಆ್ಯಂಡ್ ಓ ಸಬ ಅರ್ಬನ ಪೋಲಿಸಠಾಣೆ ಹುಬ್ಬಳ್ಳಿರವರು ಈ ಪ್ರಕರಣದ ಒಂದು ಸೀಲು ಮಾಡಿದ ಮಾದರಿ ಗಾಂಜಾ ಪ್ಯಾಕೇಟನ್ನು ಮನವಿ ಪತ್ರದೊಂದಿಗೆ ಕಳುಹಿಸಿಕೊಟ್ಟಿದ್ದು ಮಾದರಿ ಸೀಲು ಹಾಗೂ ಮಾದರಿ ಗಾಂಜಾದ ಮೇಲಿದ್ದ ಸೀಲು ಸುಸ್ಥಿತಿಯಲ್ಲಿದ್ದು ಒಂದಕ್ಕೊಂದು ತಾಳೆಯಾಗುತ್ತಿತ್ತು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 42- ಪ್ರಾಸಾ-12 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 15-10-2020 ರಂದು 100 ಗ್ರಾಂ ಗಾಂಜಾ ಇದ್ದ ಮಾದರಿ ಗಾಂಜಾವನ್ನು ಭೌತಿಕ ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಎಲೆಗಳು, ಹೂವು, ಮೊಗ್ಗು ಇದ್ದುದು ಕಂಡುಬಂದಿತು. ಅವುಗಳ ಬಣ್ಣ ತುಕ್ಕು ಹಿಡಿದ ಕಬ್ಬಿಣದ ಬಣ್ಣಕ್ಕೆ ಹೋಲಿಕೆಯಾಗುತ್ತಿತ್ತು ಮತ್ತು ಗಾಂಜಾದ ಘಾಟು ವಾಸನೆಯಿಂದ ಕೂಡಿದ್ದು ಸೂಕ್ಷ್ಮದರ್ಶಕ ಯಂತ್ರದ ಮೂಲಕ ಪರೀಕ್ಷಿಸಿದಾಗ ಅದರಲ್ಲಿ ಗಾಂಜಾದ ಹೇರ್ ಗಳು ಕಂಡುಬಂದಿದ್ದು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಅದು ಗಾಂಜಾದ ಗುಣಲಕ್ಷಣಗಳ ಧನಾತ್ಮಕ ಫಲಿತಾಂಶ ನೀಡಿದ್ದು ತನ್ನ ಅಭಿಪ್ರಾಯದಲ್ಲಿ ಮೇಲಿನ ಎಲ್ಲ ಪರೀಕ್ಷೆಗಳಲ್ಲಿ ನನಗೆ ಕಳುಹಿಸಿದ ಮಾದರಿ ಗಾಂಜಾದ ಗುಣಲಕ್ಷಣಗಳಿಂದ ಕೂಡಿದ್ದು

ಈ ಬಗ್ಗೆ ನಿಶಾನೆ ಪಿಃ 80 ರಂತೆ ಪ್ರಮಾಣಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 43– ಫ್ರಾಸಾ–13 ಅಶೋಕ ಬಿ.ಎಸ್. ಪಿ , ಪಿ ಎಸ್ ಐ ,ತಮ್ಮ ಸಾಕ್ಷ್ಯದಲ್ಲಿ, ದಿಃ 2–9–2020 ರಂದು ಪಿರ್ಯಾದಿಯು ಪಂಚರು,ಸಿಬ್ಬಂದಿ , ಆರೋಪಿ ಹಾಗೂ ಮಾಲಿನೊಂದಿಗೆ ಠಾಣೆಗೆ ಹಾಜರಾಗಿ ರಾತ್ರಿ 9.40 ಕ್ಕೆ ಕೊಟ್ಟ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ: 66/2020 ರಡಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 44– ಫ್ರಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ 1 ಮತ್ತು 2 ನೇ ಆರೋಪಿಗಳ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡೆನು ಹಾಗೂ ದಾಳಿ ಕಾಲದಲ್ಲಿ ಹಾಜರಿದ್ದ ಚಾಸಾ–2,3,8,9,11 ರಿಂದ 20 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡು ಪಿರ್ಯಾದಿ ಹಾಜರುಪಡಿಸಿದ ಮಾಲುಗಳನ್ನು ಮಾಲುಪಟ್ಟಿಗೆ ಅಳವಡಿಸಿರುತ್ತೇನೆ ಹಾಗೂ ಪಂಚನಾಮೆ ಕಾಲದಲ್ಲಿ ತೆಗೆದ ಫೋಟೊಗಳ ಬಗ್ಗೆ ಪೇದೆ ಎಮ್.ಎ ಮುಲ್ಲಾ ರವರು ಕೊಟ್ಟ ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದಡಿಯ ಪ್ರಮಾಣಪತ್ರವನ್ನು ಸ್ವೀಕರಿಸಿರುತ್ತೇನೆಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 45– ಫ್ರಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 5–9–2020 ರಂದು ಆರೋಪಿತರಿಂದ ಜಪ್ತು ಮಾಡಿದ ಗಾಂಜಾದ ಪೈಕಿ ಮಾದರಿ ಗಾಂಜಾವನ್ನು ಠಾಣೆಯ ಸಿಬ್ಬಂದಿ ಮೂಲಕ ಮನವಿಯೊಂದಿಗೆ ರಾಸಾಯನಿಕ ಪರೀಕ್ಷೆಗಾಗಿ ಆರ್ ಎಫ್ ಎಸ್ ಎಲ್ ಧಾರವಾಡ ಇವರಿಗೆ ಮೇಲಾಧಿಕಾರಿಯ ಮೂಲಕ ಕಳುಹಿಸಿಕೊಟ್ಟಿದ್ದು ಅದನ್ನು

ತಲುಪಿಸಿ ಬಂದ ಬಗ್ಗೆ ಸಿಬ್ಬಂದಿ ವರದಿಯನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 46– ಫ್ರಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 7–9–2020 ರಂದು 1 ನೇ ಆರೋಪಿಯನ್ನು 4 ದಿನಗಳ ಕಾಲ ಪೋಲೀಸ ವಶಕ್ಕೆ ಪಡೆದುಕೊಂಡು ಆರೋಪಿಯ ಸ್ವ–ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದು ಆ ಕಾಲದಲ್ಲಿ ಗಾಂಜಾವನ್ನು 3 ನೇ ಆರೋಪಿ ಅಬ್ದುಲ ರಜಾಕನಿಂದ ಪಡೆದುಕೊಂಡ ಬಗ್ಗೆ ತಿಳಿದು ಬಂದಿರುತ್ತದೆ ಮತ್ತು ಸದರಿ ಆರೋಪಿಯು ತನ್ನ ಹೇಳಿಕೆಯಲ್ಲಿ ತನ್ನ ಮೊಬೈಲ ಪೋನನನ್ನು ಪಿಂಟೋ ಸರ್ಕಲ ಹತ್ತಿರ ಇರುವ ಒಂದು ಜಾಗೆಯಲ್ಲಿ ಗಿಡಗಂಟೆಗಳ ಮಧ್ಯ ಒಂದು ಪ್ಲಾಸ್ಟಿಕ ಹಾಳೆಯಲ್ಲಿ ಮುಚ್ಚಿಟ್ಟಿರುತ್ತೇನೆ ತಾವು ಸಂಗಡ ಕರೆದುಕೊಂಡು ಹೋದರೆ ಅದನ್ನು ತಮ್ಮ ಮುಂದೆ ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 47– ಫ್ರಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 11–9–2020 ರಂದು ಇಬ್ಬರು ಪಂಚರಾದ ನಿಜಾಮ ಹಾಗೂ ಮನಜೂರ ಇವರುಗಳನ್ನು ಹಾಜರುಪಡಿಸಿಕೊಂಡು 1 ನೇ ಆರೋಪಿ ಅವರನ್ನು ಪಿಂಟೋ ಸರ್ಕಲ ಬಳಿ ಕರೆದುಕೊಂಡು ಹೋಗಿ ಅಲ್ಲಿದ್ದ ಗಿಡಗಂಟೆಗಳ ಮಧ್ಯ ಪ್ಲಾಸ್ಟಿಕ ಹಾಳೆಯಲ್ಲಿದ್ದ ಮೊಬೈಲ ಪೋನನ್ನು 1 ನೇ ಆರೋಪಿ ತೆಗೆದು ಹಾಜರುಪಡಿಸಿದ್ದನ್ನು ಸಂಜೆ 5 ರಿಂದ 5.45 ರ ವರೆಗೂ ಮಾಡಿದ ಮಹಜರ ಕಾಲದಲ್ಲಿ ವಶಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 48– ಫ್ರಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 14–9–2020 ರಂದು ಧಾರವಾಡದ ಆರ್ ಎಫ್ ಎಸ್ ಎಲ್ ದಿಂದ ರಾಸಾಯನಿಕ ಪರೀಕ್ಷೆಯ ವರದಿ

ಪಡೆದಿರುತ್ತೇನೆ ಹಾಗೂ ದಿಃ 15-9-2020 ರಂದು 3 ನೇ ಆರೋಪಿಯ ಇರುವಿಕೆಯ ಬಗ್ಗೆ ಮಾಹಿತಿ ಬಂದಿದ್ದು ಮೇಲಾಧಿಕಾರಿಗೆ ಮಾಹಿತಿ ನೀಡಿ ದಾಳಿಗೆ ಅನುಮತಿ ಪಡೆದು, ಪಂಚರನ್ನು ಕರೆ ತರುವಂತೆ ಪೇದೆ-12 ದನಿಗೊಂಡ ರವರನ್ನು ಕಳುಹಿಸಿದ್ದು ಅವರು ಇಬ್ಬರು ಪಂಚರಾದ ಮಹಮ್ಮದ ಇಸ್ಮಾಯಿಲ್ ದುಕಾನದಾರ ಹಾಗೂ ಚಂದ್ರಕಾಂತ ಯಮನಪ್ಪ ಕಿರೇಸೂರ ಕರೆತಂದಿದ್ದು , ಪಂಚರಿಗೆ ಈ ಪ್ರಕರಣದ ಮಾಹಿತಿ ನೀಡಿ ಪಂಚರಾಗುವಂತೆ ನೋಟೀಸು ನೀಡಿ ಅವರಿಂದ ಒಪ್ಪಿಗೆ ಪಡೆದಿರುತ್ತೇನೆ ಮತ್ತು ದಿಃ 15-9-2020 ರಂದು ಸಿಬ್ಬಂದಿ ಮೂಲಕ ತೂಕ ಮಾಡುವ ವ್ಯಕಿಯನ್ನು ಕರೆಸಿ ಅವರಿಗೆ ನೋಟೀಸನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 49- ಫ್ರಾಸಾ-13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 15-9-2020 ರಂದು ಬೆಳಿಗ್ಗೆ 7 ಘಂಟೆ ಹೊತ್ತಿಗೆ ಒಂದು ಟವೇರಾ ವಾಹನ ಸಂಖ್ಯೆಃ ಕೆಎ-25-ಎಎ-1513 ವಾಹನದಲ್ಲಿ ಪಂಚರು, ತೂಕ ಮಾಡುವ ವ್ಯಕ್ತಿ , ತಮ್ಮ ಸಿಬ್ಬಂದಿ ಹಾಗೂ ತೂಕ ಮಾಡುವ ಯಂತ್ರದೊಂದಿಗೆ ಮುಖ್ಯ ಪೇದೆ ದನಿಗೊಂಡ ರವರಿಂದ ಸದರಿ ವಾಹನವನ್ನು ಚಲಾಯಿಸಿಕೊಂಡು ಎನ್ ಎಚ್-50 ಹುಬ್ಬಳ್ಳಿ ಸೊಲ್ಲಾಪೂರ ಮುಖ್ಯ ರಸ್ತೆಗೆ ಹೋಗಿ ಮುಖ್ಯ ರಸ್ತೆಯಲ್ಲಿರುವ ಗದ್ದನ ಕೇರಿ ಕ್ರಾಸ ಹತ್ತಿರದ ಸೀಮಿಕೇರಿ ಕಾವಮ್ಮ ದೇವಸ್ಥಾನದ ಬಳಿಗೆ ಬೆಳಿಗ್ಗೆ 10.10 ಗಂಟೆಗೆ ಹೋಗಿ ಮರೆಯಲ್ಲಿ ನಿಂತು ನೋಡುತ್ತಿದ್ದಾಗ ಮಾಹಿತಿಯಲ್ಲಿದ್ದ ವೋಕ್ಸ ವ್ಯಾಗನ್ ಕಂಪನಿಯ ಕಾರು ಎಮ್ ಎಚ್ 11 ಎ ಎಂ 2314 ವಾಹನವು ಮಧ್ಯಾಹ್ನ 12.40 ಕ್ಕೆ ಗದ್ದನಕೇರಿ ಕ್ರಾಸ ಕಡೆಯಿಂದ ಬಂದಿದ್ದು ತಾವು ಎರಡೂ ಕಡೆಗಳಿಂದ ದಾರಿಗೆ ಅಡ್ಡಲಾಗಿ ನಿಂತುಕೊಂಡಾಗ ಸದರಿ ವಾಹನದ ಚಾಲಕ ತನ್ನ ವಾಹನದ ವೇಗ ಕಡಿಮೆ ಮಾಡಿ ಅವರನ್ನು ನೋಡಿ ಸದರಿ ವಾಹನದ ಚಾಲಕ ಕಾರನ್ನು ನಿಲ್ಲಿಸಿ ಸದರಿ ಸ್ಥಳದಿಂದ ಓಡಿ ಹೋಗಲು ಪ್ರಾರಂಭಿಸಿದ್ದು ಕೂಡಲೇ ಸಿಬ್ಬಂದಿಗಳು ಹೋಗಿ ಸದರಿ ವ್ಯಕ್ತಿಯನ್ನು ಹಿಡಿದುಕೊಂಡಿದ್ದು ಅಗ ಸಮಯ ಮಧ್ಯಾಹ್ನ 12.45 ಆಗಿತ್ತು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 50– ಫ್ರಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾವು ಅವನ ಹತ್ತಿರ ಹೋಗಿ ಅವನ ಹೆಸರು ಕೇಳಿದಾಗ ಅವನು ತನ್ನ ಹೆಸರು ಮಹಮ್ಮದ ಅಬ್ದುಲ ರಜಾಕ ಎಂದು ಸಾಂಗ್ಲಿ ವಾಸಿ ಎಂದು ಹೇಳಿದ್ದು ಸದರಿ ವಾಹನದ ನೊಂದಾವಣೆ ಸಂಖ್ಯೆಯನ್ನು ತಪಾಸಣೆ ಮಾಡಿದಾಗ ಅದರ ನೊಂದಾವಣೆ ಸಂಖ್ಯೆ: ಎಮ್ ಎಚ್ 11 ಎ ಎಮ್ 2345 ಆಗಿತ್ತು. ಸದರಿ ಕಾರಿನ ಚಾಲಕನಿಗೆ ಕಾರಿನ ಡಿಕ್ಕಿಯನ್ನು ತೆಗೆಯುವಂತೆ ಹೇಳಿದಾಗ ಆತ ಕಾರಿನ ಡಿಕ್ಕಿಯನ್ನು ತೆರೆದಾಗ ಅದರಿಂದ ಘಾಟು ವಾಸನೆ ಬಂದಿತು. ಅಲ್ಲಿದ್ದ ಒಂದು ಬಂಡಲ್ ನ್ನು ಸದರಿ ಕಾರಿನ ಚಾಲಕ ತೆಗೆದುಕೊಟ್ಟಿದ್ದು ಪಂಚರ ಸಮಕ್ಷಮ ಸದರಿ ಬಂಡಲನ್ನು ತೆರೆದು ನೋಡಿದಾಗ ಅದರಲ್ಲಿ ಗಾಂಜಾದ ಎಲೆ ಮತ್ತು ಬೀಜ ಇದ್ದವು, ನಂತರ ಸದರಿ ಕಾರ ಚಾಲಕನ ವಿಚಾರಣೆ ಮಾಡಿದೆವು ಮತ್ತು ಸದರಿ ಗಾಂಜಾವನ್ನು ಚಾಸಾ–10 ರವರಿಂದ ತೂಕ ಮಾಡಿಸಿ ನೋಡಲಾಗಿ ಅದರ ತೂಕ 1 ಕೆಜಿ 10 ಗ್ರಾಂ ಇದ್ದಿತು, ಸದರಿ ಆರೋಪಿ ಹಾಜರುಪಡಿಸಿದ ನಗದು 1500 ರೂ॥ಗಳನ್ನು ಒಂದು ಬಿಳಿ ಬಣ್ಣದ ಸಾಮಸಂಗ್ ಪೋನನ್ನು , ಬಿಳಿ ಬಣ್ಣದ ವೋಕ್ಸ ವ್ಯಾಗನ್ ಕಾರನ್ನು ವಶಪಡಿಸಿಕೊಳ್ಳಲಾಯಿತು ಮತ್ತು ದೊರೆತ ಗಾಂಜಾದ ಪೈಕಿ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ಪ್ರತ್ಯೇಕವಾಗಿ ಪ್ಯಾಕ ಮಾಡಿ ಸೀಲು ಮಾಡಲಾಯಿತು ಹಾಗೂ ವಶಪಡಿಸಿಕೊಂಡ ವಸ್ತುಗಳ ಮೇಲೆ ತನ್ನ ಹಾಗೂ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು ಹಾಗೂ ವಶಪಡಿಸಿಕೊಂಡ ಎಲ್ಲ ವಸ್ತುಗಳನ್ನು ( ಕಾರನ್ನು ಹೊರತುಪಡಿಸಿ) ಪ್ರತ್ಯೇಕವಾಗಿ ಪ್ಯಾಕ ಮಾಡಿ ಸೀಲು ಮಾಡಲಾಯಿತು ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 51– ಫ್ರಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಸದರಿ ಸ್ಥಳದಲ್ಲಿ ಮಧ್ಯಾಹ್ನ 12 ರಿಂದ 3 ಘಂಟೆ ವರೆಗೂ ಪಂಚರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಫೋಟೊಗಳನ್ನು ತೆಗೆಸಲಾಯಿತು ಮತ್ತು ನಂತರ ಠಾಣೆಗೆ ಬಂದು ಸಿಬ್ಬಂದಿಗಳಾದ ಚಾಸಾ–11, 12,13 ಹಾಗೂ ಬೀರಣ್ಣನವರ,

ರೇಣು ಸಿಕ್ಕಲಗಾರ ಇವರುಗಳ ಹೇಳಿಕೆಗಳನ್ನು ದಾಖಲೆ ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 52– ಫಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 16–9–2020 ರಂದು 3 ನೇ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸಿಬ್ಬಂದಿಯ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಮತ್ತು ಚಾಸಾ–14 ರವರು ಕೊಟ್ಟ ಕಲಂ 65 ಬಿ ಸಾಕ್ಷ ಅಧಿನಿಯಮದಡಿಯ ಪ್ರಮಾಣಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಹಾಗೂ ವಶಪಡಿಸಿಕೊಂಡ ಮಾದರಿ ಗಾಂಜಾವನ್ನು ಸಿಬ್ಬಂದಿಯ ಮೂಲಕ ಆರ್ ಎಫ್ ಎಸ್ ಎಲ್ ಧಾರವಾಡಕ್ಕೆ ಕಳುಹಿಸಿದ್ದು ಆ ಬಗ್ಗೆ ಸದರಿ ಸಿಬ್ಬಂದಿ ಕೊಟ್ಟ ಸ್ವೀಕೃತಿ ಪತ್ರವನ್ನು ಸ್ವೀಕರಿಸಿರುತ್ತೇನೆ ಹಾಗೂ ದಿಃ20–10–2020 ರಂದು ಸದರಿ ಗಾಂಜಾದ ಇನವೆಂಟರಿ ಮಾಡಿಸಲಾಯಿತು. ಎಂದು ಸಾಕ್ಷ್ಯನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 53– ಫಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 9–10–2020 ರಂದು 3 ನೇ ಆರೋಪಿ ಅಬ್ದುಲರಜಾಕ ಈತನಿಗೆ ಗಾಂಜಾ ನೀಡುತ್ತಿದ್ದ ಆರೋಪಿ ಚಂದ್ರಕಾಂತ ಅಲಿಯಾಸ್ ಪಕ್ರು ತಂದೆ ಹರಿಶ್ಚಂದ್ರ ಚವ್ಹಾಣ ಈತನು ಬೆಂಗಳೂರಿನ ಶೇಷಾದ್ರಿಪುರಮ ಪೋಲಿಸಠಾಣೆ ಗುನ್ನಾ ಸಂಃ 57/2020 ರಲ್ಲಿ ದಸ್ತಗಿರಿಯಾಗಿ ನ್ಯಾಯಾಂಗ ಬಂಧನದಲ್ಲಿದ್ದು ಬಾಡಿ ವಾರಂಟಗಾಗಿ ವಿನಂತಿ ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 54– ಫಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 20–10–2020 ರಂದು ಸದರ ಪ್ರಕರಣದ ಆರೋಪಿತರ ತಾಬಾದಲ್ಲಿ ಸ್ಯಾಂಪಲ ಕುರಿತು ಉಳಿದ ಎಲ್ಲ ಗಾಂಜಾ ಇನವೆಂಟರಿ ಮಾಡಿಸಿ ಆ ಸಮಯದಲ್ಲಿ ಒಟ್ಟು 16 ಫೋಟೊಗಳು ತೆಗೆಸಿರುತ್ತೇನೆ

ಹಾಗೂ ದಿ 23-10-2020 ರಂದು ಪಿ ಸಿ 2492 ಉಮೇಶ ರವರು ಆರ್ ಎಫ್ ಎಸ್ ಎಲ್ ಧಾರವಾಡದಿಂದ ಎಫ್ ಎಸ್ ಎಲ್ ವರದಿ ತಂದು ಹಾಜರುಪಡಿಸಿದ್ದು ಅದನ್ನು ಕಡತದಲ್ಲಿ ಅಳವಡಿಸಿರುತ್ತೇನೆ ಮತ್ತು ದಿಃ 27-10-2020 ರಂದು ಮಾನ್ಯ ಸಹಾಯಕ ಇಂಜಿನೀಯರ ಪಿ ಡಬ್ಲು ಡಿ ಹುಬ್ಬಳ್ಳಿ ರವರಿಗೆ ಗುನ್ಹಾ ಜಾಗದ ಹಾತ ನಕಾಶೆಗಾಗಿ ಕೋರಿಕೊಂಡಿರುತ್ತೇನೆ ಮತ್ತು ದಿಃ 29-10-2020 ರಂದು ಮಾರುತಿ ಹರಿಣಶಿಕಾರಿ , ಚಂದಪ್ಪ ಹರಿಣಶಿಕಾರಿ ಮತ್ತು ಅಬ್ದುಲರಜಾಕ ( 1 ರಿಂದ 3 ನೇ ಆರೋಪಿ ) ಇವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 55- ಫ್ರಾಸಾ-13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸಾಕ್ಷಿ ಒಂದು ಸ್ಯಾಮಸಂಗ್ ಮೊಬೈಲ , ಕಾರಿನ ಫೋಟೊಗಳನ್ನು , 1 ಮತ್ತು 2 ನೇ ಆರೋಪಿ ಕಡೆಯಿಂದ ವಶಪಡಿಸಿಕೊಂಡ ಬೈಕು , ರೆಡ್ ಮಿ ಕಂಪನಿಯ ಮೊಬೈಲ, ಹಳದಿಬಣ್ಣದ ಕ್ಯಾರಿಬ್ಯಾಗ .,ಕಪ್ಪು ಬಣ್ಣದ ಬ್ಯಾಗ, ರೂ1000 ನೋಡಿ ಗುರುತಿಸಿವುದಾಗಿ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 56- ಫ್ರಾಸಾ-13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 24-12-2020 ರಂದು 4 ನೇ ಆರೋಪಿ ಚಂದ್ರಕಾಂತ ಚವ್ಹಾಣ ಈತನನ್ನು ನ್ಯಾಯಾಲಯದಿಂದ 5 ದಿನಕ್ಕೆ ಕಸ್ಟಡಿಗೆ ತೆಗೆದುಕೊಂಡಿದ್ದು 25-12-2020 ರಂದು ಮಾರನೇ ದಿನ ಇಬ್ಬರು ಪಂಚರಾದ ಸಂಗಮೇ ಪಕ್ಕೀರಪ್ಪ ಸವದಿ , ರಘುನಾಥ ಪಕ್ಕೀರಪ್ಪ ಕಮತರ ಇವರ ಸಮಕ್ಷಮ 3 ನೇ ಆರೋಪಿತನಿಗೆ 4 ನೇ ಆರೋಪಿತನು ಗಾಂಜಾ ತಂದು ಕೊಡುತ್ತಿದ್ದ ಗುಲಬರ್ಗಾ ಹೈವೆ ಜಾಗದಲ್ಲಿ 4 ನೇ ಆರೋಪಿತನು ತೋರಿಸಿದ ಜಾಗದಲ್ಲಿ ಪಂಚರ ಸಮಕ್ಷಮ ಸಿಬ್ಬಂದಿಯೊಂದಿಗೆ ಫೋಟೊ ತೆಗೆದು ಪಂಚನಾಮೆಯನ್ನು ಬೆಳಿಗ್ಗೆ 11 ಘಂಟೆಯಿಂದ 11.45 ಘಂಟೆ ನಡುವೆ ಜರುಗಿಸಿರುತ್ತೇನೆ ಮತ್ತು ಫೋಟೊಗಳನ್ನು ತೆಗೆಸಿರುತ್ತೇನೆ ನಂತರ ವಾಪಸು ಠಾಣೆಗೆ ಬಂದು ಸಿಬ್ಬಂದಿಗಳಾದ ಎಚ್ ಸಿ 1563 ಎಚ್ ಸಿ ಪಾಂಡೆ ,

1628 ಎಂ ಬಿ ದನಿಗೊಂಡ , 1676 ಎಂ ವಾಯ್ ಅಂಗಡಿ , ಸಿಪಿಸಿ 2300 , ಸಿಪಿಸಿ 3030 ,ಸಿಪಿಸಿ 2717 ಹಾಗೂ ರಮೇಶ ಫಕ್ಕೀರಪ್ಪ ಅಮ್ಮಿನಬಾವಿ , ಚಂದ್ರಕಾಂತ ಯಮನಪ್ಪ ಕಿರೇಸೂರ , ಮಹಮ್ಮದ ಇಸ್ಮಾಯಿಲ್ ದುಕಾನದಾರ ರವರಿಗೆ 4 ನೇ ಆರೋಪಿ ಚಂದ್ರಕಾಂತನನ್ನು ತೋರಿಸಿ ಪುನಃ ಹೇಳಿಕೆಗಳನ್ನು ಪಡೆದುಕೊಂಡೆನು ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 56- ಫ್ರಾಸಾ-13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯ ಸ್ವಯಂ ಹೇಳಿಕೆಯನ್ನು ದಾಖಲು ಮಾಡಿಕೊಂಡು ಕಡತದಲ್ಲಿ ಅಳವಡಿಸಿಕೊಂಡು ನಂತರ ಅವನನ್ನು ಮಾರನೇ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಮತ್ತು ದಿಃ 3-2-2021 ರಂದು ಪಿ ಡಬ್ಲು ಡಿ ಹುಬ್ಬಳ್ಳಿ ರವರಿಂದ ಗುನ್ನಾ ಜಾಗೆಯ ಹಾತನಕಾಶೆಯನ್ನು ಪಡೆದು , ಹೆಸ್ಕಾಂ ವರದಿ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 56- ಫ್ರಾಸಾ-13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 3 ನೇ ಆರೋಪಿಯಿಂದ ವಶಪಡಿಸಿಕೊಂಡ ಸ್ಯಾಂಪಲನ್ನು ಎಫ ಎಸ್ ಎಲ್ ಗೆ ಕಳುಹಿಸಿ ಅದರ ವರದಿಯನ್ನು ದಿಃ 23-10-2020 ರಂದು ಪಡೆದುಕೊಂಡಿರುತ್ತೇನೆ ಮತ್ತು ದಿಃ 11-9-2021 ರಂದು 915010030107054 ಮತ್ತು 919010013779845 ರ ಬ್ಯಾಂಕ ಸ್ಟೇಟಮೆಂಟ ನೀಡಲು ಎಕ್ಸಿಸ್ ಬ್ಯಾಂಕ ಹುಬ್ಬಳ್ಳಿ ಬ್ರಾಂಚ್‌ಗೆ ಮನವಿ ಮಾಡಿಕೊಂಡಿದ್ದು ಎಕ್ಸಿಸ್ ಬ್ಯಾಂಕನವರು ಅವರೆಡೂ ಅಕೌಂಟಗಳ ಬಾಂಕ ಸ್ಟೇಟಮೆಂಟ ನೀಡಿರುತ್ತಾರೆ ಮತ್ತು 915010030107054 ಅಕೌಂಟ ಬಲಭೀಮ ಎನ್ನುವವರದಾಗಿದ್ದು, ಅದೇರೀತಿ 919010013779845 ಅಕೌಂಟ ನಂಬರ ಆರೋಪಿ ಚಂದ್ರಕಾಂತ ಗೆ ಸೇರಿದ್ದಾಗಿರುತ್ತದೆ. ಗಾಂಜಾ ತೆಗೆದುಕೊಳ್ಳಲು ಆರೋಪಿ -3 ಅಬ್ದುಲ ರಜಾಕ ರವರು ಬೇರೆ ಬೇರೆ ಹೆಸರಿನಿಂದ ಈ ಎರಡೂ ಅಕೌಂಟಗೆ ದುಡ್ಡು ಹಾಕುತ್ತಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 56– ಫ್ರಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 4 ನೇ ಆರೋಪಿ ಫೋಟೊ ಮತ್ತು ಅವರ ಬ್ಯಾಂಕ ಡಿಟೇಲ ವರದಿ ಕೊಟ್ಟಿರುತ್ತಾರೆ ಮತ್ತು ಅದೇರೀತಿ ಬಲಭೀಮಗೆ ಸಂಬಂದಪಟ್ಟ ವರದಿಯನ್ನು ಎಕ್ಸಿಸ್ ಬ್ಯಾಂಕನವರು ನೀಡಿರುತ್ತಾರೆ ಹಾಗೂ ದಿಃ 14–10–2021 ರಂದು ಹೆಸ್ಕಾಂ ಹುಬ್ಬಳ್ಳಿ ರವರು ದಿಃ 2–9–2020 ರಂದು ಸಂಜೆ 6 ಘಂಟೆಯಿಂದ ರಾತ್ರಿ 8 ಘಂಟೆ ವರೆಗೆ ಅಸೆನ್ಸನ್ ಚರ್ಚ ಹತ್ತಿರ ಇರುವ ಕಚ್ಚಾ ರಸ್ತೆಯಲ್ಲಿ ವಿಧ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿ ಕೇಳಿದ್ದು ಅವರು ಆ ಅವಧಿಯಲ್ಲಿ ಯಾವುದೇ ವಿಧ್ಯುತ್ ವ್ಯತ್ಯಯ ಕುರಿತು ಫ್ಯೂಜ್ ಆಫ ಕಾಲ್ ರಜಿಸ್ಟರನಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 56– ಫ್ರಾಸಾ–13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ 4 ನೇ ಆರೋಪಿ ಚಂದ್ರಕಾಂತ ಚವ್ಹಾಣ ಈತನ ವಿರುದ್ಧ ಹೆಚ್ಚುವರಿ ದೋಷಾರೋಪಣ ಪತ್ರ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿಯತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 57– ನೀವು ನ್ಯಾಯಾಲಯದಲ್ಲಿ ಇನ್ನೇನಾದರೂ ಹೆಚ್ಚಿನದು ಹೇಳುವುದು ಇದೆಯಾ ಅಥವಾ ದಾಖಲೆಗಳನ್ನು ಹಾಜರು ಮಾಡುತ್ತೀರಾ?

ಉತ್ತರಃ ಇಲ್ಲ

ಪ್ರಶ್ನೆ 58– ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುತ್ತೀರಾ?

ಉತ್ತರಃ ಇಲ್ಲ

(ಮೇಲ್ಕಾಣಿಸಿದ ಆರೋಪಿಗೆ ಪ್ರಶ್ನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ವಿವರಿಸಿ, ಆತ ನೀಡಿದ ಉತ್ತರಗಳನ್ನು ಯಥಾವತ್ತಾಗಿ ಪಡೆದುಕೊಳ್ಳಲಾಗಿದೆ ಎಂದು ದೃಡೀಕರಿಸುತ್ತೇನೆ).

ದಿನಾಂಕಃ 12-9-2025.

ಓ. ಹೇ. ಕೇ. ಸರಿ ಇದೆ.

sd/-
( ಬಿ. ಎಸ್. ಭಾರತಿ )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.

ಆರೋಪಿಯ ಸಹಿ.